ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ, ದಿನಾಂಕ ೧೭ನೇ ಮಾರ್ಚ್ ೧೯೮೯ ಫಾಲ್ಗುಣ ೨೬, ೧೯೧೦ ಶಕ

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಮಧ್ಯಾಹ್ನ ೨-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ರವರು ಪೀಠವನ್ನು ಅಲಂಕರಿಸಿದರು]

೧೯೮೯–೯೦ನೇ ಆಯವ್ಯಯ ಪತ್ರದ ಮಂಡನೆ

ಅಧ್ಯಕ್ಷರು.—ಈಗ ಮಾನ್ಯ ಮುಖ್ಯಮಂತ್ರಿಗಳಿಂದ ಬಜೆಟ್ ಮಂಡನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ನಾನು ೧೯೮೯–೯೦ ರ ಬಜೆಟ್ ಅಂದಾಜುಗಳನ್ನು ಮಂಡಿಸುತ್ತಿದ್ದೇನೆ...

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ ನನ್ನದೊಂದು ಕ್ರಿಯಾಲೋಪ ಇದೆ...

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಪಾಯಿಂಟ್ ಆಫ್ ಆರ್ಡರ್ ರೈಜ್ ಮಾಡಿದ್ದಾರೆ... This Government is not legally constituted Government.

(ಕಾಂಗ್ರೆಸ್ (ಐ) ಪಕ್ಷದ ಸದಸ್ಯರು ವೆಲ್‌ಗೆ ಬಂದು ಧರಣಿ ಮಾಡಿ ಘೋಷಣೆಗಳನ್ನು ಕೂಗಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕಳೆದ ಅಧಿವೇಶನದಲ್ಲಿ ತಾವು ರೂಲಿಂಗ್ ಕೊಡುತ್ತೇನೆಂದು ಹೇಳಿದ್ದೀರಿ... There is no legally constituted here Government.

(ಗೊಂದಲ)

(ಕಾಂಗ್ರೆಸ್ (ಐ) ಪಕ್ಷದ ಸದಸ್ಯರು ಸದನವೆಲಿನಲ್ಲಿ ಬಂದು ಘೋಷಣೆಗಳನ್ನು ಕೂಗುತ್ತಿದ್ದರು)

ಅಧ್ಯಕ್ಷರು.—ನೋ ಪಾಯಿಂಟ್ ಆಫ್ ಆರ್ಡರ್.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ... We have written a letter

ಅಧ್ಯಕ್ಷರು.—ಈಗ ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲ ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ

(ಗೊಂದಲ)

ಎಲ್ಲಾ ಮಾನ್ಯ ಕಾಂಗ್ರೆಸ್ ಸದಸ್ಯರು.— ನೋ... ನೋ.........

(ಕಾಂಗ್ರೆಸ್ (ಐ) ಪಕ್ಷದ ಸದಸ್ಯರುಗಳು ಸದನದ ವೆಲಿನಲ್ಲಿ ಧರಣಿ ಕುಳಿತು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)

ಶ್ರೀ ಎಸ್ ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಸನ್ಮಾನ್ಯ ಅಧ್ಯಕ್ಷರೇ

೧. ನಾನು ೧೯೮೯–೯೦ರ ಬಜೆಟ್ ಅಂದಾಜುಗಳನ್ನು ಮಂಡಿಸುತ್ತಿದ್ದೇನೆ.

೨. ನನ್ನ ಮೊದಲನೆಯ ಬಜೆಟನ್ನು ಮಂಡಿಸಲು ನನಗೆ ಸಂತೋಷವಾಗುತ್ತದೆ. ಕಳೆದ ವರ್ಷ ನಮ್ಮ ರಾಜ್ಯದಲ್ಲಿ ಹಲವಾರು ಪ್ರಮುಖ ಘಟನೆಗಳು ನಡೆದವು. ಜನತೆಯ ಆಶೋತ್ತರಗಳನ್ನು ಈಡೇರಿಸಬಲ್ಲ ಒಂದು ಸಮರ್ಥ ರಾಷ್ಟ್ರೀಯ ಪರ್ಯಾಯ ಪಕ್ಷವಾಗಿ ಜನತಾ ದಳ ಉದಯವಾದುದು ಈ ದಿಸೆಯಲ್ಲಿ ನಿಜಕ್ಕೂ ಒಂದು ಪ್ರಮುಖ ಘಟನೆ. ಇತರರು ಮಾದರಿಯೆಂದು ಅಂಗೀಕರಿಸುವಂಥ ಹಲವಾರು ನವೀನ ಕಾರ್ಯಕ್ರಮಗಳನ್ನು ನಾವು ಜಾರಿಗೆ ತಂದಿದ್ದೇವೆ. ತಮ್ಮ ಸತತ ಬೆಂಬಲ ಮತ್ತು ಸಹಕಾರದಿಂದ ಇದನ್ನು ಸಾಧ್ಯವಾಗಿಸಿದಂಥ ಕರ್ನಾಟಕ ಜನತೆಗೆ ಜನತಾ ದಳ ಸರ್ಕಾರದ ನಾಯಕನಾಗಿ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

೩. ಕಳೆದ ಕೆಲವು ವರ್ಷಗಳಲ್ಲಿ ನಾವು ಬಹು ಕಷ್ಟಕರವಾದ ಸಂಪನ್ಮೂಲ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ಈ ಪರಿಸ್ಥಿತಿಯನ್ನು ಉಂಟು ಮಾಡಿದಂಥ ಕೆಲವು ಕಾರಣಗಳು ಮಾನ್ಯ ಸದಸ್ಯರಿಗೆ ತಿಳಿದೇ ಇದೆ. ಈ ಬಗ್ಗೆ ನಾನು ಬಹಳಷ್ಟು ವಿವರವನ್ನು ಕೊಡಲು ಬಯಸುವುದಿಲ್ಲ. ಆದಾಗ್ಯೂ ಹಣಕಾಸಿನ ಕೊರತೆಯು ಮುಂದುವರಿಯಲು ಕಾರಣವಾದಂಥ ಕೆಲವು ಮುಖ್ಯ ಅಂಶಗಳನ್ನು ಪ್ರಸ್ತಾಪಿಸುವುದು ನನ್ನ ಕರ್ತವ್ಯವಾಗಿದೆ. ಈ ಅಂಶಗಳ ಮೂಲವನ್ನು ನಾವು ಒಕ್ಕೂಟ ರಚನೆಗೆ ಸಂಬಂಧಿಸಿದ ಕೆಲವು ಮೂಲಭೂತ ವಿವಾದಾಂಶಗಳಲ್ಲಿ ಗುರುತಿಸಬಹುದಾಗಿದೆ. ನಮ್ಮ ಒಕ್ಕೂಟ ವ್ಯವಸ್ಥೆಯಲ್ಲಿ ಸಂಪನ್ಮೂಲಗಳನ್ನು ನ್ಯಾಯಸಮ್ಮತವಾಗಿ ಹಂಚಿಕೊಳ್ಳಬೇಕಾದುದು ಅತಿ ಮುಖ್ಯ. ಸಂಪನ್ಮೂಲ ವರ್ಗಾವಣೆಯ ಸೂಕ್ತ ವ್ಯವಸ್ಥೆಯ ಮೂಲಕ ಮಾತ್ರವೇ, ಸ್ಥಳೀಯ ಮತ್ತು ರಾಜ್ಯ ಸರ್ಕಾರಗಳ ಅಭಿವೃದ್ಧಿ ಅಗತ್ಯಗಳಿಗೆ ಸಾಕಷ್ಟು ಗಮನ ನೀಡಲು ಸಾಧ್ಯ. ಅವುಗಳಿಗೆ ವಹಿಸಿ ಕೊಡಲಾದ ಸಂವಿಧಾನಾತ್ಮಕ ಕರ್ತವ್ಯಗಳನ್ನು ನೆರವೇರಿಸಲು ಇವು ಅತ್ಯಗತ್ಯ. ಈ ಉದ್ದೇಶಗಳು ಸ್ಪರ್ಧಾತ್ಮಕವಾದವುಗಳಲ್ಲ ಆದರೆ ರಾಷ್ಟ್ರೀಯ ಗುರಿ ಸಾಧನೆಗೆ ಪೂರಕವಾದವುಗಳಾಗಿವೆ ಎಂಬುದನ್ನು ನಾನು ಒತ್ತಿ ಹೇಳಬಯಸುತ್ತೇನೆ. ಆದ್ದರಿಂದ ರಾಷ್ಟ್ರೀಯ ಸಂಪನ್ಮೂಲಗಳಲ್ಲಿ ನ್ಯಾಯಯುತವಾದ ಪಾಲನ್ನು ನಾವು ನಿರಂತರವಾಗಿ ಕೇಳುತ್ತಿದ್ದೇವೆ. ಇದರಿಂದ ಗ್ರಾಮೀಣ ಮಟ್ಟದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ತ್ವರಿತಗೊಳಿಸಲು ನಮಗೆ ಸಾಧ್ಯವಾಗುತ್ತದೆ. ದುರದೃಷ್ಟವಶಾತ್, ಅನುಕ್ರಮವಾಗಿ ರಚಿತವಾದ ಹಣಕಾಸು ಆಯೋಗಗಳಿಗೆ ಮತ್ತು ಭಾರತ ಸರ್ಕಾರಕ್ಕೆ ರಾಜ್ಯ ಸರ್ಕಾರವು ಮಾಡಿದ ಕೋರಿಕೆಗಳಿಗೆ ಅನುಕೂಲಕರ ಪ್ರತಿಕ್ರಿಯೆ ದೊರೆತಿಲ್ಲ.

೪. ಈಗಿರುವ ಒಕ್ಕೂಟ ವ್ಯವಸ್ಥೆಯ ಕಾರ್ಯವಿಧಾನವನ್ನು ಪುನರವಲೋಕಿಸಲು ೧೯೮೩ನೇ ಜೂನ್‌ನಲ್ಲಿ ರಚಿಸಲಾದ ಸರ್ಕಾರಿಯಾ ಆಯೋಗವು, ಇತರ ವಿಷಯಗಳ ಜೊತೆಗೆ, ಕಾರ್ಪೊರೇಷನ್ ತೆರಿಗೆಯಿಂದ ಬರುವ ನಿವ್ವಳ ಉತ್ಪತ್ತಿಗಳನ್ನು ರಾಜ್ಯಗಳೊಂದಿಗೆ ಖಾಯಂ ಆಗಿ ಹಂಚಿಕೊಳ್ಳಲು ಸಾಧ್ಯವಾಗುವಂತೆ ಸಂವಿಧಾನಕ್ಕೆ ಸೂಕ್ತ ತಿದ್ದುಪಡಿಯನ್ನು ಮಾಡಬೇಕೆಂದು ಶಿಫಾರಸ್ಸು ಮಾಡಿದೆ. ಆಯೋಗದ ವರದಿಯನ್ನು ೧೯೮೭ರ ಅಕ್ಟೋಬರ್ ತಿಂಗಳಲ್ಲಿ ಸಲ್ಲಿಸಲಾಗಿದ್ದರೂ, ಈ ಸಂಬಂಧದಲ್ಲಿ ಭಾರತ ಸರ್ಕಾರವು ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ. ೧೯೫೫–೫೬ರಲ್ಲಿ ಈ ತೆರಿಗೆ ಬಾಬಿನಿಂದ ಕೇವಲ ೩೭ ಕೋಟಿ ರೂಪಾಯಿಗಳು ದೊರೆತಿದ್ದು, ೧೯೮೮–೮೯ನೇ ಸಾಲಿನಲ್ಲಿ ೪,೨೭೦ ಕೋಟಿ ರೂಪಾಯಿಗಳಷ್ಟು ದೊರೆಯಬಹುದೆಂದು ನಿರೀಕ್ಷಿಸಲಾಗಿತ್ತು. ಈ ಅವಧಿಯಲ್ಲಿ, ಹಂಚಿಕೊಳ್ಳಲಾಗದಂಥ ಅಧಿಭಾರವನ್ನು ಒಳಗೊಂಡಂತೆ, ವರಮಾನ ತೆರಿಗೆಯ ಪ್ರಮಾಣವು ೧೩೧ ಕೋಟಿ ರೂಪಾಯಿಗಳಿಂದ ೩,೬೬೦ ಕೋಟಿ ರೂಪಾಯಿಗಳಿಗೆ ಹೆಚ್ಚಿತು. ಈ ಅವಧಿಯಲ್ಲಿ, ಎಂದರೆ ೧೯೫೫–೫೬ ಮತ್ತು ೧೯೮೮–೮೯ರ ನಡುವಣ ಅವಧಿಯಲ್ಲಿ ಕಾರ್ಪೊರೇಷನ್ ತೆರಿಗೆಯು ೧೧೫ ಪಟ್ಟು ಹೆಚ್ಚಿತು. ಆದರೆ ವರಮಾನ ತೆರಿಗೆಯು ೨೮ ಪಟ್ಟು ಮಾತ್ರವೇ ಹೆಚ್ಚಿತು. ಇದರಿಂದಾಗಿ, ಈ ಹೆಚ್ಚುತ್ತಿರುವ ತೆರಿಗೆಯ ನ್ಯಾಯಯುತವಾದ ಪಾಲು ರಾಜ್ಯಗಳಿಗೆ ದೊರೆಯುತ್ತಿಲ್ಲ.

೫. ರವಾನೆ ತೆರಿಗೆ (ಕನ್ಸೈನ್‌ಮೆಂಟ್ ಟ್ಯಾಕ್ಸ್)ಯನ್ನು ವಿಧಿಸಲು ರಾಜ್ಯ ಸರ್ಕಾರಗಳಿಗೆ ಸಾಧ್ಯವಾಗುವಂತೆ ಕೇಂದ್ರ ಸರ್ಕಾರವು ಶಾಸನವನ್ನು ತರುವಲ್ಲಿ ಉಂಟಾದ ವಿಳಂಬದ ಬಗ್ಗೆ ಸರ್ಕಾರಿಯಾ ಆಯೋಗವು ತನ್ನ ಆತಂಕವನ್ನು ವ್ಯಕ್ತಪಡಿಸಿದೆ. ೧೯೮೩ರ ನವೆಂಬರ್ ಮತ್ತು ೧೯೮೪ರ ಮೇ ತಿಂಗಳಲ್ಲಿ ನಡೆದ ಮುಖ್ಯ ಮಂತ್ರಿಗಳ ಎರಡು ಸಭೆಗಳಲ್ಲಿ ಅಂತರ ರಾಜ್ಯ ರವಾನೆ ತೆರಿಗೆಯ ಬಗ್ಗೆ ವಿವರವಾದ ಚರ್ಚೆ ನಡೆಯಿತು. ಸುಮಾರು ೫ ವರ್ಷಗಳ ತರುವಾಯ ಈ ವರ್ಷದ ಫೆಬ್ರುವರಿಯಲ್ಲಿ ನಡೆದ ಮುಖ್ಯ ಮಂತ್ರಿಗಳ ಸಭೆಯಲ್ಲಿ ಈ ವಿಷಯದ ಬಗ್ಗೆ ಪುನಃ ಚರ್ಚಿಸಲಾಯಿತು. ಕೊನೆಗೊಮ್ಮೆ, ಸಂಸತ್ತಿನ

ಮುಂಗಾರು ಅಧಿವೇಶನದಲ್ಲಿ ಈ ಬಗ್ಗೆ ಅವಶ್ಯ ಶಾಸನವನ್ನು ತರುವುದಾಗಿ ಭಾರತ ಸರ್ಕಾರವು ತಿಳಿಸಿದೆ. ೧೯೮೫ರಲ್ಲೇ ತೆರಿಗೆಯನ್ನು ವಿಧಿಸಿದ್ದಿದ್ದರೆ, ಈ ವೇಳೆಗೆ ಸರಿಸುಮಾರು ೧೫೦ ಕೋಟಿ ರೂಪಾಯಿ ರಾಜ್ಯ ಸರ್ಕಾರಕ್ಕೆ ಲಭ್ಯವಾಗುತ್ತಿತ್ತು.

೬. ಇತ್ತೀಚಿಗೆ ಜರುಗಿದ ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ, ರವಾನೆ ತೆರಿಗೆಯನ್ನು ಶೀಘ್ರದಲ್ಲಿಯೇ ಪ್ರಾರಂಭಿಸಬೇಕೆಂದು, ಮಾರಾಟ ತೆರಿಗೆಯ ಬದಲಾಗಿ ಹೆಚ್ಚುವರಿ ಉತ್ಪಾದನಾ ಶುಲ್ಕಗಳನ್ನು ವಿಧಿಸಬೇಕೆಂಬ ತ್ರಿಪಾಠಿ ಸಮಿತಿಯ ಶಿಫಾರಸುಗಳನ್ನು ತಿರಸ್ಕರಿಸಬೇಕೆಂದು, ಸರ್ವ ಸಾಮಗ್ರಿಗಳನ್ನು ಕುರಿತಂತೆ ಕನಿಷ್ಠ ಮಾರಾಟ ತೆರಿಗೆ ದರಗಳನ್ನು ಅಂಗೀಕರಿಸಬೇಕೆಂದು ಹಾಗೂ ರೈಲ್ವೆ ಬುಕ್ಕಿಂಗ್ ಮುಂತಾದವುಗಳ ಮೂಲಕ ಮಾರಾಟ ತೆರಿಗೆ ತಪ್ಪಿಸಿಕೊಳ್ಳುವುದನ್ನು ತಡೆಯುವುದಕ್ಕಾಗಿ ಮಾರಾಟ ತೆರಿಗೆ ಸಿಬ್ಬಂದಿಯವರು ರೈಲುಗಳ ತಪಾಸಣೆ ಮಾಡಲು ಅನುಕೂಲ ಒದಗಿಸಬೇಕೆಂದೂ ನಾನು ವಾದಿಸಿದ್ದೇನೆ. ಬಹಳಷ್ಟು ಮಂದಿ ಮುಖ್ಯಮಂತ್ರಿಗಳು ಇದೇ ಅಭಿಪ್ರಾಯವನ್ನು ಹೊಂದಿರುವುದು ಮತ್ತು ಮೇಲೆ ಹೇಳಿದ ಅಂಶಗಳನ್ನು ಅವರು ಅಂಗೀಕರಿಸಿರುವುದು ನನಗೆ ಸಂತೋಷವುಂಟು ಮಾಡಿದೆ. ರಾಜ್ಯಗಳಿಗೆ ದೊರೆಯುತ್ತಿರುವ ಸಂಪನ್ಮೂಲಗಳನ್ನು ಕಡಿಮೆ ಮಾಡುವ ಇನ್ನೊಂದು ಕ್ರಮವನ್ನು ಇದರಿಂದ ತಡೆಹಿಡಿದಂತಾಗಿದೆ.

೭. ವರಮಾನ ತೆರಿಗೆಯು ಕೇಂದ್ರ ಮತ್ತು ರಾಜ್ಯಗಳ ನಡುವೆ ಹಂಚಿಕೆಯಾಗುವುದಾದರೂ ಅದರ ಮೇಲಿನ ಅಧಿಭಾರವು ಹಾಗೆ ಹಂಚಿಕೆಯಾಗುವುದಿಲ್ಲ. ಅನಿರ್ದಿಷ್ಟ ಕಾಲದವರೆಗೆ ಅಧಿಭಾರವನ್ನು ಮುಂದುವರೆಸಿಕೊಂಡು ಹೋದಲ್ಲಿ, ಅದು ಹೆಚ್ಚುವರಿ ವರಮಾನ ತೆರಿಗೆಯೇ ಆಗುತ್ತದೆ ಹಾಗೂ ಮಿಕ್ಕ ವರಮಾನ ತೆರಿಗೆಯಂತೆಯೇ ಅದನ್ನು ಹಂಚಿಕೊಳ್ಳಬೇಕು ಎಂದು ಏಳನೆಯ, ಎಂಟನೆಯ ಮತ್ತು ಒಂಭತ್ತನೆಯ ಹಣಕಾಸು ಆಯೋಗಗಳು ಅಭಿಪ್ರಾಯಪಟ್ಟಿವೆ. ಕೇಂದ್ರಸರ್ಕಾರವು ಈ ಅಧಿಭಾರವನ್ನು ಅತ್ಯಲ್ಪ ಕಾಲ ತೆಗೆದು ಹಾಕಿ, ಆ ತರುವಾಯ ೧೯೮೭-೮೮ರ ಮಧ್ಯ ಭಾಗದಲ್ಲಿ ಮತ್ತೆ ಅದನ್ನು ವಿಧಿಸಿತು. ಈಗ, ಇತ್ತೀಚಿನ ಕೇಂದ್ರ ಬಜೆಟ್‌ನಲ್ಲಿ ೧೯೯೦-೯೧ನೇ ತೆರಿಗೆ ಅವಧಿಗೆ ಈಗಿರುವ ವರಮಾನ ತೆರಿಗೆ ಮೇಲಿನ ಶೇಕಡಾ ೫ರ ಅಧಿಭಾರವನ್ನು ತೆಗೆದುಹಾಕಲಾಗಿದೆ. ಆದರೆ, ೫೦,೦೦೦ ರೂಪಾಯಿಗಳಿಗೂ ಮೇಲ್ಪಟ್ಟು ತೆರಿಗೆ ವಿಧಿಸಬಹುದಾದ ವರಮಾನವುಳ್ಳ ವ್ಯಕ್ತಿಗಳ ಮೇಲೆ ಶೇಕಡಾ ೮ರಷ್ಟು ಹೊಸ ಅಧಿಭಾರವನ್ನು ವಿಧಿಸಿದೆ. ಈಗಲೂ ಈ ಹೊಸ ಅಧಿಭಾರದ ಪ್ರಯೋಜನವು ಕೇಂದ್ರ ಸರ್ಕಾರಕ್ಕೆ ಮಾತ್ರವೇ ದೊರೆಯುತ್ತದೆ.

೮. ಸಮಂಜಸವಾದ ಮಾನದಂಡಗಳ ಆಧಾರದ ಮೇಲೆ (ನಾರ್ಮೆಟಿವ್ ಅಪ್ರೋಚ್) ನಿಧಿಗಳನ್ನು ಶಾಸನಬದ್ಧವಾಗಿ ಹಂಚುವುದಕ್ಕೆ ಬದಲಾಗಿ, ಯೋಜನಾ ಆಯೋಗ ಮತ್ತು ವಿವೇಚನಾಧೀನ ವರ್ಗಾವಣೆಗಳ ಮೂಲಕ ನಿಧಿಯನ್ನು ವರ್ಗಾಯಿಸುವ ನೀತಿಯನ್ನು ಈಗಲೂ ಮುಂದುವರೆಸಿಕೊಂಡು ಬರಲಾಗುತ್ತಿದೆ. ಒಟ್ಟು ವರ್ಗಾವಣೆಗಳ ಅರ್ಧಕ್ಕೂ ಹೆಚ್ಚು ಭಾಗವನ್ನು ಈ ರೀತಿ ವರ್ಗಾಯಿಸಲಾಗುತ್ತಿದೆ. ಒಕ್ಕೂಟದ ಸಂಪನ್ಮೂಲಗಳ ವರ್ಗಾವಣೆಯನ್ನು ಕುರಿತಂತೆ ಸಂವಿಧಾನ ಶಿಲ್ಪಿಗಳ ಆಶಯ ಇದಲ್ಲ. ಶಾಸನಬದ್ಧ ವರ್ಗಾವಣೆಗಳಲ್ಲೂ, ಅನುಕ್ರಮವಾಗಿ ರಚಿತವಾದ ಹಣಕಾಸು ಆಯೋಗಗಳ ವರದಿಗಳಿಂದ ನಮಗೆ ನಿರಾಸೆ ಉಂಟಾಗಿದೆ. ಒಟ್ಟು ಹಂಚಿಕೆಯಲ್ಲಿ ಕರ್ನಾಟಕದ ಪಾಲು ದಿನೇ ದಿನೇ ಕಡಿಮೆಯಾಗುತ್ತಿದೆ. ಏಳನೇ ಹಣಕಾಸು ಆಯೋಗದ ನೀಡಿಕೆಯಲ್ಲಿ ರಾಜ್ಯಗಳಿಗೆ ವರ್ಗಾಯಿಸಿದ ಒಟ್ಟಾರೆ ಹಣದ ಶೇಕಡ ೪.೮೫ರಷ್ಟು ನಮಗೆ ದೊರಕಿತು. ಇದು ಎಂಟನೆ ಹಣಕಾಸು ಆಯೋಗದಲ್ಲಿ ಶೇಕಡ ೪.೩೮ಕ್ಕೆ ಇಳಿಯಿತು. ಈಗ ಒಂಭತ್ತನೇ ಹಣಕಾಸು ಆಯೋಗವು ತನ್ನ ಮೊದಲ ವರದಿಯಲ್ಲಿ ಕೇವಲ ಶೇಕಡ ೪.೨೨ ರಷ್ಟನ್ನು ಮಾತ್ರ ಹಂಚಿಕೊಟ್ಟಿದೆ. ೯ನೇ ಹಣಕಾಸು ಆಯೋಗವು ನಮ್ಮ ಪಾಲನ್ನು ೮ನೇ ಹಣಕಾಸು ಆಯೋಗವು ನೀಡಿದ ಮಟ್ಟದಲ್ಲಿಯೇ ಉಳಿಸಿಕೊಂಡು ಬಂದಿದ್ದರೂ, ರಾಜ್ಯದ ಪಾಲು ೧೯೮೯-೯೦ರಲ್ಲಿ ೨೧ ೮೪ ಕೋಟಿ ರೂಪಾಯಿಯಷ್ಟು ಹೆಚ್ಚಾಗುತ್ತಿತ್ತು. ೯ನೇ ಹಣಕಾಸು ಆಯೋಗದ ಮೊದಲನೇ ವರದಿಯಲ್ಲಿ ೧೧೯೯.೫೯ ಕೋಟಿ ರೂಪಾಯಿಯಷ್ಟು ನಮ್ಮ ಕೊರತೆಯ ಅಂದಾಜನ್ನು ಒಂದು ವರ್ಷಕ್ಕೆ ೩೦೨.೧೧ ಕೋಟಿ ರೂಪಾಯಿಗಳ ಮಿಗಿತಾಯವಾಗಿ ಪರಿವರ್ತಿಸಲಾಗಿದೆ. ಆತಂಕದ ವಿಷಯವೇನೆಂದರೆ ರಾಜ್ಯಗಳ ಸಂಪನ್ಮೂಲಗಳನ್ನು ನಿರ್ಧರಿಸುವಲ್ಲಿ ೯ನೇ ಹಣಕಾಸು ಆಯೋಗವು ಬಳಸುತ್ತಿರುವ ಮಾನದಂಡ ಬಹಳಷ್ಟು ನ್ಯೂನತೆಗಳನ್ನು ಹೊಂದಿದೆ, (ಐ) ಕಾಂಗ್ರೆಸ್ಸೇತರ ಮುಖ್ಯಮಂತ್ರಿಗಳು ಒಂಬತ್ತನೇ ಹಣಕಾಸು ಆಯೋಗಕ್ಕಾಗಿ ಪರ್ಯಾಯ ಪರಿಶೀಲನಾಂಶಗಳನ್ನು ರೂಪಿಸಿದ್ದರು. ಅದನ್ನು ಪರಿಗಣಿಸಿದ್ದರೆ ಕೇಂದ್ರ ಸರ್ಕಾರದ ರಾಜಸ್ವ ವೆಚ್ಚವನ್ನು ಸೂಕ್ತವಾದ ರೀತಿಯಲ್ಲಿ ಪರಿಶೀಲಿಸಲು ಸಾಧ್ಯವಾಗುತ್ತಿತ್ತು. ವಿಚಿತ್ರವೆಂದರೆ, ಭಾರತ ಸರ್ಕಾರವು ತಾನು ಯಾವುದೇ ಒಂದು ನಿಶ್ಚಿತ ನಿಲುವನ್ನು ತಾಳದೆಯೇ ಈ ಪರ್ಯಾಯ ಪರಿಶೀಲನಾಂಶಗಳನ್ನು ಒಂಭತ್ತನೇ ಹಣಕಾಸು ಆಯೋಗಕ್ಕೆ ಕಳುಹಿಸಿಕೊಟ್ಟಿತು. ಪರ್ಯಾಯ ಪರಿಶೀಲನಾಂಶಗಳನ್ನು ಒಂಭತ್ತನೇ ಹಣಕಾಸು ಆಯೋಗವು ಪರಿಗಣಿಸದೇ ಹೋದಲ್ಲಿ ಅದರ ಶಿಫಾರಸುಗಳಿಂದ ರಾಜ್ಯಗಳಿಗೆ ನ್ಯಾಯ ದೊರೆಯಲಾರದು.

೯. ಒಂಭತ್ತನೇ ಹಣಕಾಸು ಆಯೋಗವು ನಮ್ಮ ರಾಜ್ಯಕ್ಕೆ ೧೯೮೯ರ ಜನವರಿಯಲ್ಲಿ ಭೇಟಿ ಕೊಟ್ಟಿತು. ಇವುಗಳನ್ನು ಮತ್ತು ಇನ್ನಿತರ ವಿಷಯಗಳನ್ನು ಹಣಕಾಸು ಆಯೋಗದ ಮುಂದೆ ನಾನು ಪ್ರಸ್ತಾಪಿಸಿದೆ. ಹಿಂದಿನ ಮೂರು ಹಣಕಾಸು ಆಯೋಗಗಳು ಸಂವಿಧಾನದ ೨೭೫ನೇ ಅನುಚ್ಛೇದದ ಮೇರೆಗೆ ಯಾವುವೇ ಅನುದಾನಗಳನ್ನು ನಮ್ಮ ರಾಜ್ಯಕ್ಕೆ ಶಿಫಾರಸು ಮಾಡಿಲ್ಲ. ಆದರೆ ಒಂಭತ್ತನೆ ಹಣಕಾಸು ಆಯೋಗವು ಶಾಲಾ ಕಟ್ಟಡಗಳ ಕೊರತೆಯ ವಿಶೇಷ ಸಮಸ್ಯೆಗೆ ಸಹಾಯಾನುದಾನವಾಗಿ ೧೨.೬೪ ಕೋಟಿ ರೂಪಾಯಿಗಳನ್ನು ಶಿಫಾರಸು ಮಾಡಿದೆ ಎಂಬ ಅಂಶವನ್ನು ನಾನು ಇಲ್ಲಿ ತಮ್ಮ ಮುಂದೆ ತಿಳಿಸಲು ಆಪೇಕ್ಷಿಸುತ್ತೇನೆ.

೧೦. ರಾಜ್ಯದ ಕೆಲವಾರು ವಿಶಿಷ್ಟ ಸಮಸ್ಯೆಗಳನ್ನು ನಾನು ಒಂಭತ್ತನೇ ಹಣಕಾಸು ಆಯೋಗದ ಗಮನಕ್ಕೆ ತಂದಿದ್ದೇನೆ. ನಮ್ಮ ಜಿಲ್ಲಾ ಪರಿಷತ್ತು ಹಾಗೂ ಮಂಡಲ ಪಂಚಾಯಿತಿ ವ್ಯವಸ್ಥೆಯನ್ನು ಬಲಪಡಿಸುವ ಪ್ರಯತ್ನಕ್ಕೆ ಆಯೋಗದ ಬೆಂಬಲ ಬೇಕು ಎನ್ನುವುದೂ ನಾನು ಪ್ರಸ್ತಾಪಿಸಿದ ಕೆಲವು ಮುಖ್ಯ ವಿಷಯಗಳಲ್ಲಿ ಒಂದು. ರಾಜ್ಯ ನೀತಿಯ ನಿರ್ದೇಶಕ ತತ್ವಗಳು ಬಹುಮುಖ್ಯ ಎಂದು ಆಯೋಗವು ಪರಿಗಣಿಸಿರುವಂತೆ ಕಂಡು ಬರುತ್ತದೆ. ಅಂತೆಯೇ ಗುಜರಾತಿಗೆ ೯೫ ಕೋಟಿ ರೂಪಾಯಿಗಳನ್ನು ಮತ್ತು ತಮಿಳುನಾಡಿಗೆ ೧೯೪ ಕೋಟಿ ರೂಪಾಯಿಗಳನ್ನು ಅವುಗಳ ಪಾನನಿರೋಧ ನೀತಿಗಾಗಿ ನೀಡಿದೆ. ಅದೇ ಸೂತ್ರವನ್ನು ಅನ್ವಯಿಸಿ ನೋಡಿದರೆ ಪಂಚಾಯತಿ ರಾಜ್ಯ ಸಂಸ್ಥೆಗಳ ಸ್ಥಾಪನೆ ಮೂಲಕ ಜನತೆಗೆ ಅಧಿಕಾರ ವಹಿಸಿಕೊಡುವುದು ಒಂದು ಪ್ರಮುಖ ರಾಜ್ಯನೀತಿಯ ನಿರ್ದೇಶಕ ತತ್ವದ ಅನುಷ್ಠಾನವೇ ಆಗಿದೆ. ಈ ಉದ್ದೇಶಕ್ಕಾಗಿ ಒಂಭತ್ತನೆ ಹಣಕಾಸು ಆಯೋಗವು ೩೮೬.೦೬ ಕೋಟಿ ರೂಪಾಯಿಗಳನ್ನು ಅನುಮತಿಸಬೇಕೆಂದು ನಾವು ಕೋರಿದ್ದೇವೆ. ಬೆಂಗಳೂರು ನಗರ ಸಮುಚ್ಚಯ ಪ್ರದೇಶದಲ್ಲಿ ಹಿಂದೆಂದೂ ಆಗಿರದಷ್ಟು ಜನಸಂಖ್ಯೆಯ ಬೆಳವಣಿಗೆಯಿಂದಾಗಿ ನಗರ ಜೀವನದಲ್ಲಿ ಅನೇಕ ಸಮಸ್ಯೆಗಳು ಉದ್ಭವಿಸುತ್ತಿರುವುದು ಮಾನ್ಯ ಸದಸ್ಯರಿಗೆ ತಿಳಿದೇ ಇದೆ. ನಗರದ ತ್ವರಿತಗತಿಯ ಬೆಳವಣಿಗೆಯ ಈ ಸಮಸ್ಯೆಯ ಪರಿಹಾರಕ್ಕಾಗಿ ನಮಗೆ ವರ್ಷಕ್ಕೆ ೧೯.೨೨ ಕೋಟಿ ರೂಪಾಯಿಗಳನ್ನು ಒದಗಿಸಬೇಕೆಂದು ಆಯೋಗಕ್ಕೆ ಮನವಿ ಮಾಡಿಕೊಂಡಿದ್ದೇವೆ. ಆಯೋಗದವರು ಈ ವಿಷಯವನ್ನು ಕುರಿತಂತೆ ವಿವರಗಳನ್ನು ಅಪೇಕ್ಷಿಸಿದ್ದಾರೆ. ಅವರು ಅದನ್ನು ಪರಿಗಣಿಸಬಹುದೆಂದು ನಾವು ಆಶಿಸುತ್ತೇವೆ.

೧೧. ೧೯೮೨–೮೩ ರಿಂದ ೧೯೮೭–೮೮ ರವರೆಗೆ ಪದೇ ಪದೇ ಅನಾವೃಷ್ಟಿ ತಲೆದೋರಿದ್ದರಿಂದ, ರಾಜ್ಯ ಸರ್ಕಾರದ ಸಂಪನ್ಮೂಲವು ಬಹಳಷ್ಟು ಒತ್ತಡಕ್ಕೆ ಗುರಿಯಾಯಿತು. ಈ ಅವಧಿಯಲ್ಲಿ ಭಾರತ ಸರ್ಕಾರವು ೧೬೩.೯೨ ಕೋಟಿ ರೂಪಾಯಿಗಳನು ಒದಗಿಸಿತಾದರೂ, ಆ ಹಣವನ್ನು ಬಹುಪಾಲಿಗೆ ಯೋಜನಾ ಮುಂಗಡವಾಗಿ ನೀಡಿತು. ಪದೇ ಪದೇ ತಲೆದೋರಿದ ಅನಾವೃಷ್ಟಿಯಿಂದಾಗಿ ರಾಜ್ಯದ ಸಂಪನ್ಮೂಲವು ತೀವ್ರ ಬಾಧೆಗೊಳಗಾದಾಗ ಮತ್ತು ಯೋಜನಾ ಬದ್ಧ ಅಭಿವೃದ್ಧಿಯ ವಿನ್ಯಾಸವು ಅಸ್ತವ್ಯಸ್ತವಾದಾಗ, ಅಗತ್ಯವಿರುವುದು ಹೆಚ್ಚಿಗಿನ ಹಣಕಾಸು ನೆರವೇ ಹೊರತು ಯೋಜನಾ ಮುಂಗಡದ ನೆರವಲ್ಲ. ಆದ್ದರಿಂದ, ಯೋಜನಾ ಆಯೋಗವು ಮತ್ತು ಎಂಟನೇ ಹಣಕಾಸು ಆಯೋಗವು, ಒಂದು ರಾಜ್ಯವು ೪ ರಿಂದ ೫ ನಿರಂತರ ವರ್ಷಗಳ ಕಾಲ ಅನಾವೃಷ್ಟಿಗೆ ಗುರಿಯಾದರೆ, ಕೇಂದ್ರದ ಇಡೀ ನೆರವನ್ನು ಅನುದಾನವಾಗಿ ನೀಡತಕ್ಕದ್ದು ಎಂದು ಸೂಕ್ತವಾಗಿಯೇ ಅಭಿಪ್ರಾಯ ಪಟ್ಟಿವೆ. ಭಾರತ ಸರ್ಕಾರವು ನಮ್ಮ ನ್ಯಾಯ ಸಮ್ಮತ ಕೋರಿಕೆಗೆ ಮನ್ನಣೆ ನೀಡಿದ್ದರೆ ನಮ್ಮ ಏಳನೇ ಯೋಜನಾ ವೆಚ್ಚವು ೮೬ ಕೋಟಿ ರೂಪಾಯಿಗಳಷ್ಟು ಹೆಚ್ಚಾಗುತ್ತಿತ್ತು. ಯೋಜನಾ ವಿನ್ಯಾಸವು ಈಗಾಗಲೇ ತೊಂದರೆಗೆ ಈಡಾಗಿರುವುದರ ಜೊತೆಗೆ ಮುಂಬರುವ ವರ್ಷಗಳಲ್ಲಿ ಯೋಜನಾ ಮುಂಗಡಗಳ ವಸೂಲಿಯಿಂದಾಗಿ ನಮ್ಮ ಯೋಜನೆಯ ಸಂಪನ್ಮೂಲಗಳು ಇನ್ನಷ್ಟು ಕಡಿಮೆಯಾಗುತ್ತವೆ. ಉದಾಹರಣೆಗೆ, ೧೯೮೮–೮೯ ರಲ್ಲಿ ಈ ವಸೂಲಾತಿಯಿಂದ ನಮ್ಮ ವಾಡಿಕೆಯ ಯೋಜನಾ ನೆರವು ೨೪.೧೩ ಕೋಟಿ ರೂಪಾಯಿಗಳಷ್ಟು ಇಳಿಯಿತು. ೧೯೮೯–೯೦ರಲ್ಲಿ ಈ ಬಗ್ಗೆ ೨೩.೫೦ ಕೋಟಿ ರೂಪಾಯಿಯಷ್ಟು ವಸೂಲಿ ಮಾಡುವ ನಿರೀಕ್ಷೆ ಇದೆ.

೧೨. ಸಾಲದ ಹೊರೆ ಹೆಚ್ಚುತ್ತಾ ಹೋದುದು ರಾಜ್ಯದ ಸಂಪನ್ಮೂಲಗಳ ಕೊರತೆಗೆ ಇನ್ನೊಂದು ಮುಖ್ಯ ಕಾರಣ. ಈ ಪರಿಣಾಮವಾಗಿ ಅಭಿವೃದ್ಧಿ ಉದ್ದೇಶಗಳಿಗೆ ಲಭ್ಯವಿದ್ದ ನಿವ್ವಳ ಮೊಬಲಗು ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಾ ಬಂದಿದೆ. ೧೯೮೮–೮೯ರಲ್ಲಿ, ಕೇಂದ್ರ ಸರ್ಕಾರದಿಂದ ಪಡೆದ ಪ್ರತಿ ೧೦೦ ರೂಪಾಯಿಗಳಿಗೆ ರಾಜ್ಯವು ೯೫ ರೂಪಾಯಿಗೂ ಮೇಲ್ಪಟ್ಟು ಮರುಸಂದಾಯ ಮಾಡಿದೆ. ಹೀಗಿರುವುದರಿಂದ ಸಾಲಗಳನ್ನು ಮನ್ನಾ ಮಾಡುವ, ಸಾಲದ ವಿನ್ಯಾಸಗಳನ್ನು ಮಾರ್ಪಡಿಸುವ ಮತ್ತು ಸಾಲಗಳ ಮೇಲಿನ ಬಡ್ಡಿ ದರವನ್ನು ತಗ್ಗಿಸುವ ವಿಚಾರವನ್ನು ಹಣಕಾಸು ಆಯೋಗ ಮತ್ತು ಕೇಂದ್ರ ಸರ್ಕಾರವು ಪರಿಶೀಲಿಸುವುದು ಸೂಕ್ತ ಹಾಗೂ ಸಕಾಲಿಕ.

೧೩. ವರಮಾನ ಮತ್ತು ವೇತನಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ನಿಲುವು ನಮಗೆ ಪ್ರತಿಕೂಲವಾಗಿ ಪರಿಣಮಿಸಿದೆ. ಸಧ್ಯದಲ್ಲಿ, ಕೇಂದ್ರ ಸರ್ಕಾರವು ತನ್ನ ನೌಕರವರ್ಗದವರ ವೇತನ ಶ್ರೇಣಿಗಳನ್ನು ಏರಿಸುವಾಗ ಹಾಗೂ ಅವರ ತುಟ್ಟಿಭತ್ಯಗಳನ್ನು ಪರಿಷ್ಕರಿಸುವಾಗ ಏಕಪಕ್ಷೀಯವಾಗಿ ವರ್ತಿಸುತ್ತಿದೆ. ರಾಜ್ಯ ಸರ್ಕಾರಗಳೂ ಅದನ್ನು ಅನುಸರಿಸದೆ ಗತ್ಯಂತರವಿಲ್ಲ. ತಮ್ಮ ಸೀಮಿತ ಸಂಪನ್ಮೂಲಗಳ ಕಾರಣದಿಂದಾಗಿ. ಈ ವೆಚ್ಚವನ್ನು ವಹಿಸುವುದು ರಾಜ್ಯಗಳಿಗೆ ಕಷ್ಟವಾಗುತ್ತದೆ. ವರಮಾನ ಮತ್ತು ವೇತನಗಳಿಗೆ ಸಂಬಂಧಿಸಿದಂತೆ ಒಂದು ರಾಷ್ಟ್ರೀಯ ಏಕಾಭಿಪ್ರಾಯವನ್ನು ರೂಪಿಸದ ಹೊರತು ರಾಜ್ಯಗಳ ಮೇಲಣ ಹೊರೆಗಳು ಹೆಚ್ಚುತ್ತಾ ಹೋಗಿ ಅಭಿವೃದ್ಧಿಗಾಗಿ ದೊರೆಯುವಂಥ ಸಂಪನ್ಮೂಲಗಳು ಇನ್ನಷ್ಟು ಕಡಿಮೆಯಾಗುತ್ತವೆ.

೧೪. ಕೇಂದ್ರ ಸರ್ಕಾರದ ಕಾರ್ಯನೀತಿಗಳಿಂದ ಉಂಟಾದ ನಿರ್ಬಂಧಗಳ ಪರಿಣಾಮವಾಗಿ, ಅಭಿವೃದ್ಧಿಯ ಗತಿಯನ್ನು ಕಾಪಾಡಿಕೊಂಡು ಬರಲು ನಾವು ಹೆಚ್ಚುವರಿ ಸಂಪನ್ಮೂಲಗಳ ಸಂಗ್ರಹಣೆಗಾಗಿ ಕ್ರಮ ಕೈಗೊಳ್ಳುವುದು ಅನಿವಾರ್ಯವಾಯಿತು. ಆರನೇ ಯೋಜನೆಯ ಅವಧಿಯಲ್ಲಿ ನಮ್ಮ ಹೆಚ್ಚುವರಿ ಸಂಪನ್ಮೂಲ ಸಂಗ್ರಹಣೆಯು ಸುಮಾರು ೭೫೪.೮೩ ಕೋಟಿ ರೂಪಾಯಿ. ಏಳನೇ ಯೋಜನೆಯ ಮೊದಲ ನಾಲ್ಕು ವರ್ಷಗಳಲ್ಲಿ ಹೆಚ್ಚುವರಿ ಸಂಪನ್ಮೂಲ ಸಂಗ್ರಹಣೆ ೧,೧೪೭.೫೬ ಕೋಟಿ ರೂಪಾಯಿ. ಆದರೆ, ಇದೂ ಸಹ ಸಾಕಾಗಲಿಲ್ಲ.

ರಾಜ್ಯ ಯೋಜನೆ

೧೫. ಇದರ ಪರಿಣಾಮವಾಗಿ ರಾಜ್ಯದ ಸಂಪನ್ಮೂಲಗಳ ಮೇಲಿನ ಒತ್ತಡವನ್ನು ನಿಯಂತ್ರಿಸುವ ಸಲುವಾಗಿ ನಾವು ಆರ್ಥಿಕ ಮಿತವ್ಯಯ ಕ್ರಮಗಳನ್ನು ವಿಧಿಸಬೇಕಾಯಿತು. ನಾವು ಎಷ್ಟೇ ಪ್ರಯತ್ನ ಮಾಡಿದಾಗ್ಯೂ, ಯೋಜನಾ ವೆಚ್ಚದಲ್ಲಿ ಕೊರತೆಯನ್ನು ತಪ್ಪಿಸಲು ಸಾಧ್ಯವಾಗಲಿಲ್ಲ. ೧೯೮೮-೮೯ರಲ್ಲಿ ಯೋಜನಾ ವೆಚ್ಚವು ೮೦೦ ಕೋಟಿ ರೂಪಾಯಿಯಾಗಬಹುದೆಂದು ಈಗ ನಾವು ನಿರೀಕ್ಷಿಸುತ್ತೇವೆ.

೧೬. ಬರುವ ವರ್ಷವು ಏಳನೇ ಯೋಜನೆಯ ಕೊನೆಯ ವರ್ಷ. ಇಡೀ ಆರನೆಯ ಯೋಜನೆಯ ಒಟ್ಟು ವೆಚ್ಚ ೨೬೧೦ ಕೋಟಿ ರೂಪಾಯಿಗಳಾಗಿದ್ದರೆ ಏಳನೇ ಯೋಜನೆಯ ಮೊದಲ ನಾಲ್ಕು ವರ್ಷಗಳಲ್ಲೇ ಸರಿಸುಮಾರು ೩,೦೭೦ ಕೋಟಿ ರೂಪಾಯಿಗಳನ್ನು ನಾವು ವಿನಿಯೋಗಿಸಿರಬಹುದು ೩,೫೭೫ ಕೋಟಿ ರೂಪಾಯಿಯ ಅನುಮೋದಿತ ಯೋಜನಾ ವೆಚ್ಚಕ್ಕೆ ಹೋಲಿಸಲಾಗಿ. ಏಳನೇ ಯೋಜನೆಯ ಅಂತ್ಯದ ವೇಳೆಗೆ ನಾವು ಸುಮಾರು ೪,೧೦೦ ಕೋಟಿ ರೂಪಾಯಿ ಒಟ್ಟು ವೆಚ್ಚದ ಗುರಿ ತಲುಪುವ ನಿರೀಕ್ಷೆ ಇದೆ. ೧೯೮೯-೯೦ರ ಸಾಲಿಗೆ, ೧,೦೪೦ ಕೋಟಿ ರೂಪಾಯಿ ಯೋಜನಾ ವೆಚ್ಚಕ್ಕೆ ನಾವು ಪ್ರಸ್ತಾವಿಸಿದ್ದೇವೆ. ಇದು ಪ್ರಸಕ್ತ ವರ್ಷದ ಅನುಮೋದಿತ ಯೋಜನಾ ವೆಚ್ಚಕ್ಕಿಂತ ೧೪೦ ಕೋಟಿ ರೂಪಾಯಿಯಷ್ಟು ಹೆಚ್ಚಾಗಿದೆ. ಸಂಪನ್ಮೂಲಗಳ ಕೊರತೆ ಇದ್ದರೂ, ನಾವು ಏಳನೇ ಯೋಜನೆಯ ವೆಚ್ಚದ ಗುರಿಗಳನ್ನು ವಾಸ್ತವವಾಗಿ ಸಾಧಿಸಲಿದ್ದೇವೆ ಎಂಬುದನ್ನು ತಿಳಿಸಲು ನನಗೆ ಹೆಮ್ಮೆ ಎನಿಸುತ್ತದೆ. ೧೯೮೯-೯೦ರ ಯೋಜನಾ ಹಂಚಿಕೆಗಳನ್ನು ಅನುಬಂಧ-Iರಲ್ಲಿ ಕೊಡಲಾಗಿದೆ.

೧೭. ನಿರಂತರವಾಗಿ ವಿಫಲವಾದ ಮಳೆಗಾಲಗಳ ನಂತರ ಈ ವರ್ಷ ಸಕಾಲದಲ್ಲಿ ಒಳ್ಳೆ ಮಳೆಯಾಯಿತು. ಆದರೆ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ಬೆಂಗಳೂರು ಮತ್ತು ಇತರ ಕೆಲವು ಭಾಗಗಳಲ್ಲಿ ಸತತವಾಗಿ ಸುರಿದ ಭಾರಿ ಮಳೆ ಹಿಂದೆಂದೂ ಆಗಿರದಷ್ಟು ಹಾವಳಿಯನ್ನುಂಟುಮಾಡಿತು. ರಾಜ್ಯದ ಹಲವಾರು ಸ್ಥಳಗಳಲ್ಲಿ ಒಮ್ಮಿಂದೊಮ್ಮೆಲೆ ನೆರೆ ಸಂಭವಿಸಿತು. ಇದರಿಂದ ಒಟ್ಟು ೧೬೨ ಜನ ಅಸುನೀಗಿದರು. ನಾವು ೨೮೫.೭೧ ಕೋಟಿ ರೂಪಾಯಿಯಷ್ಟು ಕೇಂದ್ರದ ನೆರವನ್ನು ಕೋರಿದ್ದೆವು. ಆದರೆ ಭಾರತ ಸರ್ಕಾರ ಕೇವಲ ೧೫.೩೭೫ ಕೋಟಿ ರೂಪಾಯಿ ನೆರವು ನೀಡಿತು.

ಕೃಷಿ ಮತ್ತು ಸಂಬಂಧಿತ ಸೇವೆಗಳು

೧೮. ಕೃಷಿ ರಂಗದಲ್ಲಿ ಮಾತ್ರವಲ್ಲದೆ. ಸುವ್ಯವಸ್ಥಿತ ರೀತಿಯಲ್ಲಿ ಎಲ್ಲಾ ಭೂ ಬಳಕೆ ಆಧಾರಿತ ಚಟುವಟಿಕೆಗಳಿಗೆ ಸಂಬಂಧಿಸಿದ ಮಾರ್ಗೋಪಾಯದಲ್ಲಿ ಪ್ರಮುಖ ಬದಲಾವಣೆ ಮಾಡಿಕೊಳ್ಳುವುದು ಅಗತ್ಯ. ಜೀವಿ ಪರಿಸರ ಸಂರಕ್ಷಣೆ, ಸಸ್ಯ ಹಾಗೂ ಪ್ರಾಣಿಗಳ ನೆಲೆಯ ನಿರ್ವಹಣೆ, ಕೃಷಿ ಹಾಗೂ ಸಂಬಂಧಿಸಿದ ಭೂ ಬಳಕೆ ವಲಯಗಳ ಮುಖ್ಯ ಪ್ರದೇಶಗಳ ಕಡೆಗೆ ನಾವು ಪರಿಪೂರ್ಣ ಗಮನ ನೀಡಬೇಕಾಗಿದೆ. ಉತ್ತಮ ಹೈನು ನಿರ್ವಹಣೆ ಮತ್ತು ಅದಕ್ಕೆ ಲಗತ್ತಾದ ಗ್ರಾಮೀಣ ವಿದ್ಯುಚ್ಛಕ್ತಿ ಹಾಗೂ ಮೇವಿನ ಸಮಸ್ಯೆಗಳೇ ಈ ಸಮಸ್ಯೆಗೆ ಮೂಲ. ಇದರಿಂದ ರಾಜ್ಯದ ಸಮಗ್ರ ಭೂ ಬಳಕೆ ನಿರ್ವಹಣಾ ಯೋಜನೆ ರೂಪುಗೊಂಡಿತು ಇದು 'ಕ್ಲಂಪ್' ಎಂದು ಜನಪ್ರಿಯವಾಗಿದೆ. ಜೀವಿ ಪರಿಸರ ಸಂರಕ್ಷಣೆ, ಕೃಷಿ

ಕಾರ್ಯಾಚರಣೆಯನ್ನು ತೀವ್ರಗೊಳಿಸುವುದು ಮತ್ತು ಭೂಮಿಯ ಉತ್ಪಾದಕತೆ ಇವುಗಳ ಮೇಲೆ ಇದರ ಪ್ರಭಾವ ಹೆಚ್ಚುವ ನಿರೀಕ್ಷೆ ಇದೆ. ಜಪಾನಿನ ಓವರ್‌ಸೀಸ್ ಇಕನಾಮಿಕ್ ಕೋಆಪರೇಷನ್ ಫಂಡ್, ಕ್ಲೆಫ್ ಬಗ್ಗೆ ತೀವ್ರ ಆಸಕ್ತಿ ವಹಿಸಿದ್ದು, ಈ ಕಾರ್ಯಕ್ರಮವನ್ನು ಬಳ್ಳಾರಿ, ಚಿತ್ರದುರ್ಗ, ಧಾರವಾಡ, ಹಾಸನ, ರಾಯಚೂರು ಜಿಲ್ಲೆಗಳ ೧೫ ಮಂಡಲಗಳಲ್ಲಿ ಪ್ರಾಯೋಗಿಕವಾಗಿ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ ಎಂಬುವನ್ನು ಸದನಕ್ಕೆ ತಿಳಿಸಲು ನನಗೆ ಸಂತೋಷವೆನಿಸುತ್ತದೆ.

೧೯. ಕೃಷಿ ಉತ್ಪಾದನೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸುವ ಸಲುವಾಗಿ ೧೯೮೮–೮೯ನೇ ಸಾಲಿನಲ್ಲಿ ''ಹಸಿರು ಕಿರಣ'' ಕಾರ್ಯಕ್ರಮ ಎಂಬ ಹೊಸ ಯೋಜನೆಯೊಂದನ್ನು ಕಾರ್ಯಗತಗೊಳಿಸಲು ಕೈಗೆತ್ತಿಕೊಳ್ಳಲಾಯಿತು, ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಸಲುವಾಗಿ ಈ ವರ್ಷ ಜಿಲ್ಲೆಗೊಂದರಂತೆ ಒಟ್ಟು ೨೦ ತಾಲ್ಲೂಕುಗಳನ್ನು ಆಯ್ಕೆ ಮಾಡಲಾಗಿತ್ತು. ಪ್ರಾರಂಭಿಕ ವರದಿಗಳು ಅತ್ಯಂತ ಅನುಕೂಲಕರವಾಗಿದ್ದು, ಈ ಕಾರ್ಯಕ್ರಮವನ್ನು ೧೯೮೯–೯೦ರಲ್ಲೂ ಮುಂದುವರಿಸಲಾಗುವುದು.

೨೦. ಈ ವರ್ಷ, ಅಕ್ಕಿ ಮತ್ತು ತೊಗರಿಬೇಳೆಯ ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ರಾಜ್ಯದ ೯ ಜಿಲ್ಲೆಗಳಲ್ಲಿ ವಿಶೇಷ ಆಹಾರ ಧಾನ್ಯಗಳ ಉತ್ಪಾದನಾ ಕಾರ್ಯಕ್ರಮವನ್ನು (ಎಸ್‌ಎಫ್‌ಪಿಪಿ) ಪ್ರಾರಂಭಿಸಲಾಯಿತು. ಭಾರೀ ಮಳೆ ಬೀಳುವಲ್ಲಿ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಅಕ್ಕಿ ಉತ್ಪಾದನೆಯನ್ನು ಅಧಿಕಗೊಳಿಸುವ ಬಗ್ಗೆ ಮುಖ್ಯವಾಗಿ ಗಮನ ನೀಡಲಾಗಿತ್ತು ಮತ್ತು ಇದರ ಪರಿಣಾಮಗಳು ಪ್ರೋತ್ಸಾಹದಾಯಕವಾಗಿದ್ದುವು. ಎಸ್‌ಎಫ್‌ಪಿಪಿಯನ್ನು ಹಮ್ಮಿಕೊಂಡಿರುವ ತಾಲ್ಲೂಕುಗಳಲ್ಲಿ ನಡೆಸಿದ ಬೆಳೆ ಕಟಾವು ಪ್ರಯೋಗಗಳಿಂದ ಈ ಪ್ರದೇಶಗಳಲ್ಲಿ ಪ್ರತಿ ಹೆಕ್ಟೇರಿಗೆ ೧೮೫೦ ಕಿ.ಗ್ರಾಂ. ಅಕ್ಕಿ ಉತ್ಪಾದನೆಯಾಗಿದ್ದರೆ, ಎಸ್ ಎಫ್ ಪಿ ಪಿ ಯನ್ನು ಹಮ್ಮಿಕೊಳ್ಳದ ತಾಲ್ಲೂಕುಗಳಲ್ಲಿ ಸರಾಸರಿ ಉತ್ಪಾದನೆ ಸುಮಾರು ೧೩೫೦ ಕಿ. ಗ್ರಾಂ.ಗಳು ಮಾತ್ರ ಎಂದು ತಿಳಿದು ಬಂದಿದೆ. ಈ ಕಾರ್ಯಕ್ರಮವನ್ನು ೧೯೮೯–೯೦ರಲ್ಲಿ ಸಹ ಮುಂದುವರಿಸಲಾಗುವುದು.

೨೧. ೯೮೮–೮೯ನೇ ವರ್ಷದ ಉತ್ತರಾರ್ಧದಲ್ಲಿ ಪ್ರತಿಕೂಲಕರ ಪರಿಸ್ಥಿತಿ ಉಂಟಾದರೂ ಆಹಾರ ಧಾನ್ಯಗಳ ಉತ್ಪಾದನೆಯು ೬೫ ಲಕ್ಷ ಟನ್ನುಗಳಷ್ಟಾಗಬಹುದೆಂದು ನಾವು ನಿರೀಕ್ಷಿಸಿದ್ದೇವೆ. ಹಿಂದಿನ ನಾಲ್ಕು ವರ್ಷಗಳಲ್ಲಿ ಎಣ್ಣೆ ಬೀಜಗಳ ಉತ್ಪಾದನೆಯು ಪ್ರತಿ ಹೆಕ್ಟೇರಿಗೆ ಸರಾಸರಿ ೬೦೦ ಕಿ ಗ್ರಾಂ.ಗಳಷ್ಟಿದ್ದು, ೧೯೮೯–೯೦ರಲ್ಲಿ ಇದು ಪ್ರತಿ ಹೆಕ್ಟೇರಿಗೆ ೮೦೦ ಕಿ.ಗ್ರಾಂ. ಗಳಷ್ಟಾಗಬಹುದೆಂದು ನಿರೀಕ್ಷಿಸಲಾಗಿದೆ. ಈ ವರ್ಷ ೬೮೦.೩೭ ಲಕ್ಷ ರೂಪಾಯಿಗಳ ಒಟ್ಟು ವೆಚ್ಚದಲ್ಲಿ ಕೈಗೊಳ್ಳಲಾದ ಎಣ್ಣೆ ಬೀಜಗಳ ಅಭಿವೃದ್ಧಿ ಕಾರ್ಯಕ್ರಮವನ್ನು ಮುಂದಿನ ವರ್ಷವೂ ಮುಂದುವರಿಸಲಾಗುವುದು. ಈ ರಾಷ್ಟ್ರೀಯ ಬೀಜ ಯೋಜನೆ IIIಕ್ಕೆ ವಿಶ್ವಬ್ಯಾಂಕು ಸದ್ಯದಲ್ಲೇ ಸಮ್ಮತಿ ನೀಡುವ ಸಂಭವವಿದೆ. ಇದರಿಂದ ನಮ್ಮ ರಾಜ್ಯದ ಬೀಜಗಳ ಗುಣಮಟ್ಟ ಉತ್ತಮಗೊಳ್ಳುತ್ತದೆ. ಪಾಮ್ ಎಣ್ಣೆ ಪ್ರಾತ್ಯಕ್ಷಿತೆ ಕಾರ್ಯಕ್ರಮದ ಮೂಲಕ ಪಾಮ್ ಎಣ್ಣೆ ಉತ್ಪಾದನೆಗಾಗಿ ಹಾಕಿಕೊಂಡಿರುವ ಭಾರಿ ಯೋಜನೆಗೆ ಆಯ್ಕೆ ಮಾಡಿರುವ ಮೂರು ರಾಜ್ಯಗಳ ಪೈಕಿ ನಮ್ಮ ರಾಜ್ಯವು ಒಂದಾಗಿದೆ. ಈ ಯೋಜನೆಯು ದುಬಾರಿ ಖಾದ್ಯ ತೈಲಗಳ ಆಮದಿನ ಅಗತ್ಯತೆಯನ್ನು ಕಡಿಮೆ ಮಾಡುವುದೆಂಬ ಭರವಸೆ ನನಗಿದೆ.

೨೨. ೧೯೮೯–೯೦ರಲ್ಲಿ ಕರ್ನಾಟಕ ಹಾಲು ಉತ್ಪಾದಕರ ಸಂಯುಕ್ತ ಸಂಘವು ೧೬೦ ಕೋಟಿ ರೂಪಾಯಿಗಳ ಒಟ್ಟು ವೆಚ್ಚದಲ್ಲಿ ಕ್ಷೀರಧಾರಾ III ಯೋಜನೆಯನ್ನು ಕೈಗೊಳ್ಳುವುದು. ಹತ್ತು ಹಾಲಿನ ಕೇಂದ್ರಗಳು (ಡೇರಿಗಳು), ಮೂವತ್ತೆರಡು ಶೀತಲೀಕರಣ ಕೇಂದ್ರಗಳು ಮತ್ತು ೨೯೫೩ ಗ್ರಾಮಾಂತರ ಡೇರಿ ಸಹಕಾರಿ ಸಂಘಗಳನ್ನು ಮೂರು ವರ್ಷಗಳ ಅವಧಿಯಲ್ಲಿ ಸ್ಥಾಪಿಸಲಾಗುವುದು ಮತ್ತು ೫.೮೩ ಲಕ್ಷ ರೈತರ ಹೆಸರನ್ನು ಸೇರಿಸಿಕೊಳ್ಳಲಾಗುವುದು. ಕರ್ನಾಟಕ ಹಾಲು ಉತ್ಪಾದಕರ ಸಂಯುಕ್ತ ಸಂಘವು ಇತ್ತೀಚೆಗೆ ಏರಿಸಿರುವ ಹಾಲಿನ ಬೆಲೆಗಳ ಬಹುಪಾಲನ್ನು ಉತ್ಪಾದಕರಿಗೇ ನೀಡಲಾಗಿದೆ. ರಾಜ್ಯದ ಪಶು ಸಂಗೋಪನಾ ಸೇವೆಗಳನ್ನು ಉತ್ತಮಗೊಳಿಸುವ ಸಲುವಾಗಿ, ೧೯೮೯–೯೦ ರಲ್ಲಿ ೧೮೮ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ೧೫೦ ಹೊಸ ಗ್ರಾಮೀಣ ಪಶು ವೈದ್ಯ ಶಾಲೆಗಳನ್ನು ಸ್ಥಾಪಿಸಲು ಹಾಗೂ ೫೦ ಪಶು ವೈದ್ಯಶಾಲೆಗಳನ್ನು ಮೇಲ್ದರ್ಜೆಗೇರಿಸಲು ನಿರ್ಣಯಿಸಿದ್ದೇವೆ.

೨೩. ನಾವು ೧೯೮೩ ರಿಂದ ನಮ್ಮ ರೈತರಿಗೆ ಅನೇಕ ರಿಯಾಯಿತಿಗಳನ್ನು ಮತ್ತು ಸೌಲಭ್ಯಗಳನ್ನು ನೀಡಿದ್ದೇವೆ. ಕಳೆದ ವರ್ಷ ವಿಶೇಷ ಸಂದರ್ಭವೆಂದು ಪರಿಗಣಿಸಿ ಒದಗಿಸಿದ ಸಹಕಾರ ಸಾಲಗಳ ಮೇಲಿನ ಬಡ್ಡಿಯ ಸಹಾಯಧನದಿಂದ ನಮ್ಮ ರೈತರಿಗೆ ಪ್ರಯೋಜನ ದೊರೆತಿದೆ. ಇದರಿಂದಾಗಿ ರಾಜ್ಯ ಬೊಕ್ಕಸಕ್ಕೆ ೮೨ ಕೋಟಿ ರೂಪಾಯಿ ವೆಚ್ಚವುಂಟಾಗಿದೆ. ರೈತರಿಗೆ ನೀಡುವ ಬಡ್ಡಿ ಸಹಾಯಧನಕ್ಕೆ ಸಂಬಂಧಿಸಿದಂತೆ ನಬಾರ್ಡ್‌ನ ನಿಲುವು ಅನುಕೂಲಕರವಾಗಿಲ್ಲ. ನಾನು ಈ ವಿಷಯವನ್ನು ಭಾರತ ಸರ್ಕಾರದೊಡನೆ ಪ್ರಸ್ತಾಪಿಸಿದ್ದೇನೆ. ಈ ಹಿಂದೆ ಅನೇಕ 'ತಕಾವಿ' ಸಾಲಗಳನ್ನು ಮನ್ನಾ ಮಾಡಲಾಗಿತ್ತು

ಮತ್ತು ಇತರ ತೆರಿಗೆ ರಿಯಾಯಿತಿಗಳನ್ನು ಸಹ ಒದಗಿಸಲಾಗಿತ್ತು. ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು ಕಳೆದ ನಾಲ್ಕು ವರ್ಷಗಳಲ್ಲಿ ವರ್ಷಕ್ಕೆ ೪೦,೧೦೦ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ತನ್ನ ಗುರಿಯನ್ನು ಸಾಧಿಸುತ್ತ ಬಂದಿದೆ. ಈ ರೀತಿಯ ಸಹಾಯಧನ ವೆಚ್ಚ ನೀಡಿ ವಿದ್ಯುತ್ ಸಂಪರ್ಕ ಕಲ್ಪಿಸುವುದರಿಂದ ಕರ್ನಾಟಕ ವಿದ್ಯುತ್‌ಚ್ಛಕ್ತಿ ಮಂಡಲಿಗೆ ವರ್ಷವೊಂದಕ್ಕೆ ೧೩.೭೦ ಕೋಟಿ ರೂಪಾಯಿ ನಿವ್ವಳ ನಷ್ಟ ಉಂಟಾಗುತ್ತಿದರೂ, ರೈತರ ಹಿತದೃಷ್ಟಿಯಿಂದ ಇದನ್ನು ಮುಂದುವರೆಸಿಕೊಂಡು ಬರಲು ನಾವು ನಿರ್ಧರಿಸಿದ್ದೇವೆ.

೨೪. ಕೃಷಿ ಮತ್ತು ಸಂಬಂಧಿತ ಸೇವೆಗಳಿಗೆ, ಈ ವಲಯದಲ್ಲಿ ಆರನೇ ಯೋಜನೆಯಲ್ಲಿ ೨೨೨.೬೬ ಕೋಟಿ ರೂಪಾಯಿಗಳನು ಖರ್ಚು ಮಾಡಲಾಗಿದು, ಏಳನೇ ಯೋಜನೆಯ ಮೊದಲ ನಾಲ್ಕು ವರ್ಷಗಳಲ್ಲಿನ ವೆಚ್ಚವು ೨೪೨.೪೭ ಕೋಟಿ ರೂಪಾಯಿಗಳಾಗುವ ನೀರಿಕ್ಷೆ ಇದೆ. ೧೯೮೯–೯೦ರಲ್ಲಿನ ಹಂಚಿಕೆಯು ೭೯.೩೧ ಕೋಟಿ ರೂಪಾಯಿ. ಹೀಗೆ ಏಳನೇ ಯೋಜನಾವಧಿಯ ಒಟ್ಟು ವೆಚ್ಚವು ೩೨೧.೭೮ ಕೋಟಿ ರೂಪಾಯಿಗಳಾಗುವ ನಿರೀಕ್ಷೆ ಇದೆ.

೨೫. ನಗರ ಪ್ರದೇಶಗಳಲ್ಲಿ ಮರಗಳ ನೆಡುವಿಕೆಗಾಗಿ ನಮಗೆ "ಇಂದಿರಾ ಪ್ರಿಯದರ್ಶಿನಿ ವೃಕ್ಷ ಮಿತ್ರ ಪ್ರಶಸ್ತಿ"ಯನು ನೀಡಲಾಗಿದೆ. ೧೯೮೮–೮೯ರಲ್ಲಿ ೪೭.೬೧೫ ಹೇಕ್ಟೇರು ಪ್ರದೇಶದಲ್ಲಿ ವನ ನಿರ್ಮಾಣದ ಗುರಿಯನ್ನಿಟ್ಟುಕೊಂಡಿದ್ದರೂ, ನಮ್ಮ ವಾಸ್ತವಿಕ ಸಾಧನೆ ೪೯,೩೬೭ ಹೆಕ್ಟೆರುಗಳಾಗಿರುತ್ತದೆ ನೆಡಲಾದ ಸಸಿಗಳ ಸಂಖ್ಯೆ ೨೧.೫೮ ಕೋಟಿ ಇದರಲ್ಲಿ ಖುಷ್ಕಿ ಭೂ ಅಭಿವೃದ್ಧಿ ಕಾರ್ಯಕ್ರಮದ ಮೇರೆಗೆ ಮಾಡಲಾದ ಖಾಸಗಿ ಪ್ರಯತ್ನ ಸೇರಿಲ್ಲ. ಆದರೂ ನಾವು ಈ ಹೆಗ್ಗಳಿಕೆಯನ್ನು ಸ್ಮರಿಸುತ್ತ, ಕೈಕಟ್ಟಿ ಕೂರಲಾಗುವುದಿಲ್ಲ. ನಿತ್ಯ ಹರಿದ್ವರ್ಣ ಮತ್ತು ಅರೆ ನಿತ್ಯ ಹರಿದ್ವರ್ಣ ಅರಣ್ಯಗಳಲ್ಲಿ ಕನಿಷ್ಠ ಸಂಖ್ಯೆಯಲ್ಲಿ ಮರಗಳನ್ನು ಕಡಿಯುವ ಕಾರ್ಯವನ್ನು ಸರ್ಕಾರ ಈಗಾಗಲೇ ನಿಲ್ಲಿಸಿದೆ. ಅದೃಷ್ಟವಶಾತ್ ಭಾರತ ಸರ್ಕಾರವು ಟಿಂಬರ್ ಮೇಲಿನ ಆಮದು ಶುಲ್ಕವನ್ನು ಕಡಿಮೆ ಮಾಡುವ ಮೂಲಕ ನಮ್ಮ ಅರಣ್ಯಗಳನ್ನು ಸಂರಕ್ಷಿಸುವ ಅವಶ್ಯಕತೆಯನ್ನು ಸಹ ಒಪ್ಪಿಕೊಂಡಿದೆ. ಮಂಗಳೂರು ಬಂದರಿನ ಮೂಲಕ ಆಮದು ಮಾಡಿಕೊಳ್ಳುವ ಸುಮಾರು ೩.೫೧ ಲಕ್ಷ ಘನ ಮೀಟರುಗಳಷ್ಟು ಟಿಂಬರ್ ಸರ್ಕಾರವು ಪ್ರತಿ ವರ್ಷ ಸಂಗ್ರಹಿಸಿದ ಪರಿಮಾಣಕ್ಕೆ ಸಮವಾಗುತ್ತದೆ. ''ಸಿ'' ಮತ್ತು ''ಡಿ'' ವರ್ಗದ ರೆವಿನ್ಯೂ ಜಮೀನುಗಳನ್ನು ಸಾಮಾಜಿಕ ವನ ನಿರ್ಮಾಣದ ಅಭಿವೃದ್ಧಿಗಾಗಿ ಅರಣ್ಯ ಇಲಾಖೆಗೆ ನಾವು ವರ್ಗಾಯಿಸಿದ್ದೇವೆ. ಇವುಗಳ ಪೈಕಿ ಕೆಲವು ಜಮೀನುಗಳನ್ನು ಇದುವರೆಗೂ ಅಭಿವೃದ್ಧಿ ಪಡಿಸಲಾಗಿಲ್ಲ: ಅವುಗಳನ್ನು ಹಿಂದಕ್ಕೆ ಪಡೆಯಲು ಮತ್ತು ಭೂ ಅನುದಾನ ನಿಯಮಗಳ ಮೇರೆಗೆ ಅವುಗಳನ್ನು ನೀಡಲು ಉದ್ದೇಶಿಸಿದ್ದೇನೆ. ಇದರಿಂದಾಗಿ ವನನಿರ್ಮಾಣ ಕಾರ್ಯವನ್ನು ತೀವ್ರಗೊಳಿಸುವುದಕ್ಕಾಗಿ ವ್ಯಕ್ತಿಗಳು ಅರಣ್ಯ ನಿರ್ಮಾಣ ಕಾರ್ಯವನ್ನು ಕೈಗೊಳ್ಳಬಹುದು.

ಗ್ರಾಮೀಣ ಅಭಿವೃದ್ಧಿ

೨೬. ನನ್ನ ಬಜೆಟ್‌ನಲ್ಲಿ ಗ್ರಾಮೀಣ ಅಭಿವೃದ್ಧಿಗೆ ಅಗ್ರಸ್ಥಾನವನ್ನು ನೀಡಲಾಗುವುದು, ಗ್ರಾಮಗಳ ಸುಧಾರಣಾ ಕಾರ್ಯವನ್ನು ತ್ವರಿಗೊಳಿಸುವುದು ಮತ್ತು ಗ್ರಾಮೀಣ ಜನತೆಗೆ ಅಧಿಕ ಉದ್ಯೋಗಾವಕಾಶವನ್ನು ಹಾಗೂ ಅಧಿಕ ವರಮಾನವನ್ನು ಸೃಜಿಸುವುದು ಇದರ ಉದ್ದೇಶ. ಗ್ರಾಮೀಣ ಉದ್ಯೋಗ ಕಾರ್ಯಕ್ರಮಗಳು ಎಂದರೆ ಎನ್. ಆರ್. ಇ. ಪಿ., ಆರ್. ಎಲ್. ಇ. ಜಿ. ಪಿ. ಹಾಗೂ ಆರ್. ಇ. ಜಿ. ಎಸ್, ಕಾರ್ಯಕ್ರಮಗಳಿಗಾಗಿ ೧೯೮೮–೮೯ ರಲ್ಲಿ ಬಜೆಟ್ ಅಂದಾಜು ೫೩.೬೬ ಕೋಟಿ ರೂಪಾಯಿಯಾಗಿತ್ತು. ಸಂಪನ್ಮೂಲಗಳ ಕೊರತೆಯಿದ್ದರೂ, ಈ ಕಾರ್ಯಕ್ರಮಕ್ಕೆ ೧೭.೯೩ ಕೋಟಿ ರೂಪಾಯಿಗಳಷ್ಟು ಹೆಚ್ಚು ಹಣ ಹಂಚಿಕೆ ಮಾಡಲಾಗಿದೆ. ಹೀಗೆ, ಈ ವರ್ಷ ೩೭೭ ಲಕ್ಷ ಕೆಲಸದ ದಿನಗಳ ಸೃಜನೆಯಾಗುವುದು. ಭಾರತ ಸರ್ಕಾರ ನೀಡುವ ಹೆಚ್ಚಿನ ನೆರವನ್ನು ಬಿಟ್ಟು, ೧೯೮೯–೯೦ ರಲ್ಲಿ ಗ್ರಾಮೀಣ ಅಭಿವೃದ್ಧಿಯ ಅಡಿಯಲ್ಲಿ ರಾಜ್ಯ ಯೋಜನಾ ಹಂಚಿಕೆಯು ೭೮.೪೭ ಕೋಟಿ ರೂಪಾಯಿಗಳಷ್ಟಾಗುವುದು. ಗ್ರಾಮೀಣ ಅಭಿವೃದ್ಧಿಯ ಅಡಿಯಲ್ಲಿ ರಾಜ್ಯದ ಏಳನೇ ಯೋಜನಾ ವೆಚ್ಚವು ಈಗ ೩೪೬.೭೨ ಕೋಟಿ ರೂಪಾಯಿಯಾಗುವುದು. ಇದು ಆರನೇ ಯೋಜನೆ ಅವಧಿಯಲ್ಲಿ ೧೫೫.೫೨ ಕೋಟಿ ರೂಪಾಯಿಯಾಗಿತ್ತು. ಇದು ಶೇಕಡ ೧೨೩ ರಷ್ಟು ಹೆಚ್ಚು. ೧೯೮೯–೯೦ ರಲ್ಲಿ ೩೯೭ ಲಕ್ಷ ಕೆಲಸದ ದಿನಗಳಷ್ಟು ಉದ್ಯೋಗಾವಕಾಶ ಸೃಜನೆಯಾಗುವುದೆಂದು, ನಿರೀಕ್ಷಿಸಿದ್ದೇವೆ.

೨೭. ಎನ್‌ಆರ್‌ಇಪಿ ಮತ್ತು ಆರ್‌ಎಲ್‌ಇಜಿಪಿ ಕಾರ್ಯಕ್ರಮಗಳನ್ನು ವಿಲೀನಗೊಳಿಸುವ ಮತ್ತು ಶೇಕಡ ೭೫ ರಷ್ಟು ನಿಧಿಗಳನ್ನು ಒದಗಿಸುವ ಭಾರತ ಸರ್ಕಾರದ ಹೊಸ ಕಾರ್ಯನೀತಿಯನ್ನು ಇಲ್ಲಿ ಉಲ್ಲೇಖಿಸಬಯಸುತ್ತೇನೆ. ಈ ಕ್ರಮದಿಂದಾಗಿ, ರಾಜ್ಯಕ್ಕೆ ಯಾವುದೇ ಹೆಚ್ಚಿನ ಲಾಭವಾಗುವ

ದಿಲ್ಲ. ಕೆಲಸದ ದಿನಗಳ ಸಂಖ್ಯೆಯನ್ನು ಹೆಚ್ಚಿಸುವ ಉದ್ದೇಶವಿರುವಲ್ಲಿ, ಅವರು ಈ ಕಾರ್ಯಕ್ರಮಕ್ಕೆ ಪೂರ್ಣವಾಗಿ ನಿಧಿಗಳನ್ನು ಒದಗಿಸಬೇಕಾಗುತ್ತದೆ. ಕರ್ನಾಟಕ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ನಿರಂತರ ಗಮನ ನೀಡುವುದು ನಮ್ಮ ಆಶಯವಾಗಿದೆ ನಮ್ಮ ವಾರ್ಷಿಕ ಯೋಜನೆಯಲ್ಲಿ ಜಿಲ್ಲಾ ಪರಿಷತ್‌ಗಳಿಗೆ ೧೯೮೮–೮೯ನೇ ಸಾಲಿಗೆ ಮೊದಲು ಹಂಚಿಕೆ ಮಾಡಿದ್ದ ೯೯.೧೯ ಕೋಟಿ ರೂಪಾಯಿಯನ್ನು ೧೯೮೯–೯೦ ರಲ್ಲಿ ೧೧೧೫.೩೧ ಕೋಟಿ ರೂಪಾಯಿಗೆ ಏರಿಸಲಾಗುತ್ತಿದೆ.

೨೮. ಜಿಲ್ಲಾ ಪರಿಷತ್ ವಲಯದ ಹೊರಗೂ, ರಾಜ್ಯ ಯೋಜನಾ ಹಂಚಿಕೆಯ ಗಣನೀಯ ಭಾಗವನ್ನು ಹೆಚ್ಚಾಗಿ ಗ್ರಾಮೀಣ ಕ್ಷೇತ್ರಗಳಿಗಾಗಿ ಖರ್ಚು ಮಾಡಲಾಗಿದೆ. ವಿಶೇಷವಾಗಿ ಗ್ರಾಮಿಗಿದೆ. ಪ್ರದೇಶಕ್ಕೆ ಮತ್ತು ಗ್ರಾಮೀಣ ಜನರಿಗೆ ಅನುಕೂಲ ನೀಡುವ ಮುಖ್ಯ ಉದ್ದೇಶವನ್ನು ಹೊಂದಿರುವ ಹಲವಾರು ವಲಯಗಳ ಅಡಿಯಲ್ಲಿ ಮಾಡಲಾದ ಹಂಚಿಕೆಗಳನ್ನು ಅನುಬಂಧ–೨ ರಲ್ಲಿ ಕೊಡಲಾಗಿದೆ ಗ್ರಾಮೀಣ ಪ್ರದೇಶದಲ್ಲಿ ನೆಲೆಸಿರುವ ಬಹುಸಂಖ್ಯಾತ ಜನತೆಯ ಬಗ್ಗೆ ನನ್ನ ಸರ್ಕಾರಕ್ಕಿರುವ ಕಳಕಳಿಗೆ ಇದು ಪ್ರತ್ಯಕ್ಷ ಸಾಕ್ಷಿಯಾಗಿದೆ.

ಕಲಿಕೆ ಯೊಡನೆ ಗಳಿಗೆ

೨೯. ಗ್ರಾಮೀಣ ಪ್ರದೇಶಗಳಲ್ಲಿ ನಿರುದ್ಯೋಗವು ವ್ಯಾಪಕವಾಗಿದೆಯೆಂಬುದು ತಿಳಿದೇ ಇದೆ. ಈಗಿರುವ ವ್ಯವಸ್ಥೆಯು ವ್ಯಕ್ತಿಯು ಸ್ವಯಂ ಉದ್ಯೋಗ ಹೊಂದಲು ಅವಶ್ಯಕ ಕುಶಲತೆಗಳನ್ನು ಅವನಿಗೆ ಒದಗಿಸುವುದಿಲ್ಲ. ಈ ಸಮಸ್ಯೆಯನ್ನು ನಾನು ಎಚ್ಚರಿಕೆಯಿಂದ ಪರಿಶೀಲಿಸಿದ್ದೇನೆ ಮತ್ತು ನಮ್ಮ ಯುವಕರು ಸ್ವಾವಲಂಬಿಗಳಾಗುವಂತೆ ಮಾಡಲು ಅವರಿಗೆ, ಅವರ ಉದ್ಯೋಗಕ್ಕೆ ಸಂಬಂಧಿಸಿದಂತೆ ವೃತ್ತಿ ತರಬೇತಿಯನ್ನು ನೀಡುವ ಅಗತ್ಯತೆ ಇದೆ ಎಂದು ನನಗೆ ಮನವರಿಕೆಯಾಗಿದೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು, ಭೂ ಸೇನಾ ಕಾರ್ಯಕ್ರಮಗಳೊಂದಿಗೆ ಟ್ರೈಜಮ್‌ನ್ನು ಸಂಯೋಜಿಸಲು ಮತ್ತು ಪ್ರತಿವರ್ಷ ೨೦,೦೦೦ ಯುವಕರು ಮತ್ತು ಯುವತಿಯರಿಗೆ ತರಬೇತಿ ನೀಡಲು ನಾನು ಪ್ರಸ್ತಾವಿಸಿದ್ದೇನೆ. ಅವರಿಗೆ ಪ್ರತಿ ತಿಂಗಳು ೩೧೦ ರೂಪಾಯಿಗಳನ್ನು ಸಂದಾಯ ಮಾಡಲಾಗುವುದು. ಈ ಉದ್ಯೋಗ ಆಧಾರಿತ ಒಂದು ವರ್ಷದ ತರಬೇತಿಯ ಕೊನೆಯಲ್ಲಿ ರಸ್ತೆಗಳು, ಅಡಿಗಾಲುವೆಗಳು, ಸೇತುವೆಗಳು, ಕಟ್ಟಡಗಳ ನಿರ್ಮಾಣ ಇತ್ಯಾದಿಗಳಲ್ಲಿ ಅವರು ಅವಶ್ಯಕ ಕುಶಲತೆಗಳನ್ನು ಪಡೆಯುವರು ಮತ್ತು ಇದರಿಂದ ಅವರು ಸ್ವತಂತ್ರ ಹಾಗೂ ಸ್ವಯಂ ಉದ್ಯೋಗಿಗಳಾಗುವರು ಎಂಬ ಭರವಸೆ ನನಗೆ ಇದೆ. ತರಬೇತಿದಾರರನ್ನು ಆಯ್ಕೆ ಮಾಡುವಲ್ಲಿ, ಎಲ್ಲ ಪ್ರದೇಶಗಳಿಗೆ ನ್ಯಾಯಯುತ ಮತ್ತು ಸಾಕಷ್ಟು ಪ್ರಾತಿನಿಧ್ಯವನ್ನು ನೀಡಲಾಗುವುದು. ಈ ಕಾರ್ಯಕ್ರಮವು ವರ್ಷವೊಂದಕ್ಕೆ ೪೦ ಲಕ್ಷ ಕೆಲಸದ ದಿನಗಳನ್ನು ಸೃಜಿಸಲಿದೆ,

ರಸ್ತೆಗಳು

೩೦. ಮೇ ೧, ೧೯೮೮ ರಂದು ಸಂಸತ್ತು ತೆಗೆದುಕೊಂಡ ನಿರ್ಣಯದಂತೆ, ಮೋಟಾರು ಸ್ಪಿರಿಟ್ ಮತ್ತು ಡೀಸಲ್ ಮೇಲೆ ಪ್ರತಿ ಲೀಟರಿಗೆ ೩.೫ ಪೈಸೆಯಷ್ಟು ಇದ್ದ ಕರವನ್ನು ಮೂಲ ಬೆಲೆಯ ಶೇಕಡ ೫ ರಂತೆ ವಿಧಿಸುವ ಮೂಲಕ ಕೇಂದ್ರ ರಸ್ತೆ ನಿಧಿಯನ್ನು ವೃದ್ಧಿಗೊಳಿಸಲಾಗಿದೆ. ಪ್ರಾಪ್ತವಾಗುವ ಮೊತ್ತದ ಶೇಕಡ ಅರವತ್ತುನಾಲ್ಕರಷ್ಟನ್ನು ರಾಜ್ಯಗಳಿಗೆ ಹಂಚಲಾಗುವುದು. ಕರ್ನಾಟಕಕ್ಕೆ ೧೯೮೯–೯೦ ರಲ್ಲಿ ೧೫.೫೭ ಕೋಟಿ ರೂಪಾಯಿ ದೊರೆಯುವ ನಿರೀಕ್ಷೆಯಿದೆ. ೧೯೮೭–೮೮ ರಲ್ಲಿ ೭೦ ಲಕ್ಷ ರೂಪಾಯಿ ಮಾತ್ರ ದೊರೆತಿತ್ತು. ೧೯೮೯–೯೦ ರಲ್ಲಿ ಅನೇಕ ರಸ್ತೆ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ನಾನು ಪ್ರಸ್ತಾವಿಸಿದ್ದೇನೆ.

ಉದ್ದಿಮೆ

೩೧. ಅಭಿವೃದ್ಧಿ ಸಾಲಗಳು ಮತ್ತು ತೆರಿಗೆ ರಿಯಾಯಿತಿಗಾಗಿ ಧನ ಸಹಾಯ ಮತ್ತು ಮೂಲಭೂತ ಸೌಲಭ್ಯವನ್ನು ಒದಗಿಸುವ ಮೂಲಕ ಉದ್ಯಮಗಳಿಗೆ ಪ್ರೋತ್ಸಾಹಗಳನ್ನು ಒದಗಿಸುವ ವಿಷಯದಲ್ಲಿ ಮಹತ್ವಪೂರ್ಣವಾದ ಬದಲಾವಣೆಯನ್ನು ಮಾಡಿದ್ದೇವೆ. ಆಹಾರ ಸಂಸ್ಕರಣ, ಕಂಪ್ಯೂಟರ್ ಮತ್ತು ಇತರ ಎಲೆಕ್ಟ್ರಾನಿಕ್ ಉದ್ಯಮಗಳಿಗೆ ಒತ್ತು ನೀಡಲಾಗುವುದು.

೩೨. ರಾಜ್ಯದಲ್ಲಿ ೩ ಔದ್ಯಮಿಕ ಬೆಳವಣಿಗೆ ಕೇಂದ್ರಗಳನ್ನು ಸ್ಥಾಪಿಸಲು ಪ್ರಸ್ತಾವವನ್ನು ಈಗಾಗಲೇ ಭಾರತ ಸರ್ಕಾರಕ್ಕೆ ನಾವು ಕಳುಹಿಸಿಕೊಟ್ಟಿದ್ದೇವೆ. ಇಂಥ ಸ್ಥಾಪನೆಯಿಂದ ಒದಗುವ ಪ್ರಯೋಜನಗಳು ವಿಶಾಲ ಪ್ರದೇಶಕ್ಕೆ ಹರಡಿ ಅಂತಿಮವಾಗಿ ಪ್ರಾದೇಶಿಕ ಅಭಿವೃದ್ಧಿಯನ್ನು

ಸಾಧಿಸುವಂಥ ರೀತಿಯಲ್ಲಿ ಈ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ನಿಯಮಿಸಲಾದ ಮಾರ್ಗದರ್ಶಕ ಸೂತ್ರಗಳ ಪ್ರಕಾರವೇ ಮೂಲಭೂತ ಪರಿಕರಗಳನ್ನು ಒದಗಿಸುವ ಮೂಲಕ ಇದನ್ನು ಸಾಧಿಸಲಾಗುವುದು. ಈ ಔದ್ಯಮಿಕ ಬೆಳವಣಿಗೆ ಕೇಂದ್ರಗಳಲ್ಲಿ ಹೆಚ್ಚು ಹೆಚ್ಚು ಜನರು ಬಂಡವಾಳ ಹೂಡುವಂತೆ ಆಕರ್ಷಿಸಲು, ಔದ್ಯಮಿಕ ಬಂಡವಾಳ ಹೂಡಿಕೆಗೆ ಈಗಿರುವ ಬಹಳಷ್ಟು ಉತ್ತೇಜಕಗಳೊಂದಿಗೆ, ಇನ್ನಷ್ಟು ಉದಾರ ರಿಯಾಯಿತಿಗಳನ್ನು ಹಾಗೂ ಉತ್ತೇಜಕಗಳನ್ನು ನೀಡಲು ನಾನು ಉದ್ದೇಶಿಸಿದ್ದೇನೆ. ಭಾರತ ಸರ್ಕಾರದಿಂದ ಈ ಕುರಿತು ಅನುಮತಿ ದೊರೆತ ಕೂಡಲೇ ಈ ರಿಯಾಯಿತಿಗಳನ್ನು ನಾವು ರೂಪಿಸುತ್ತೇವೆ.

೩೩. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಭಾರಿ ಪ್ರಮಾಣದಲ್ಲಿ ಕೈಗೊಳ್ಳಲು ಉದ್ದೇಶಿಸಲಾದ ಮಂಗಳೂರು ರಿಫೈನರಿ ಮತ್ತು ಪೆಟ್ರೋ ಕೆಮಿಕಲ್ಸ್, ಶಾಖೋತ್ಪನ್ನ ವಿದ್ಯುತ್ ಕೇಂದ್ರ, ಸೀಬರ್ಡ್ ನೌಕಾ ಯೋಜನೆ ಮತ್ತು ಕೈಗಾ ಅಣುಶಕ್ತಿ ಕೇಂದ್ರಗಳಿಂದ ಮುಂದಿನ ೧೦-೧೫ ವರ್ಷಗಳಲ್ಲಿ ರಾಜ್ಯದ ಕರಾವಳಿ ಪ್ರದೇಶವು ತೀವ್ರ ಗತಿಯಲ್ಲಿ ಅಭಿವೃದ್ಧಿ ಹೊಂದಲಿದೆ. ಇದಕ್ಕಾಗಿ ಸುಮಾರು ೮,೦೦೦ ಕೋಟಿ ರೂಪಾಯಿ ಬಂಡವಾಳ ಹೂಡಲಾಗುವುದೆಂದು ಅಂದಾಜು ಮಾಡಲಾಗಿದೆ. ಈ ಭಾಗದಲ್ಲಿ ಉದ್ಯಮಗಳನ್ನು ವ್ಯವಸ್ಥಿತವಾಗಿ ಅಭಿವೃದ್ಧಿಗೊಳಿಸುವ ಕಾರ್ಯದ ಸಮನ್ವಯ ಮತ್ತು ಗತಿ ನಿರ್ದೇಶನಕ್ಕಾಗಿ ನನ್ನ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯೊಂದನ್ನು ಈಗಾಗಲೇ ರಚಿಸಲಾಗಿದೆ.

೩೪. ಪ್ರಸಕ್ತ ರಾಜ್ಯದಲ್ಲಿ ಸುಮಾರು ೧,೪೦,೪೫೬ ಹೆಕ್ಟೇರ್ ಭೂಮಿಯಲ್ಲಿ ಉಪ್ಪುನೇರಳೆ ಬೆಳೆಯಲಾಗುತ್ತಿದೆ. ೧೯೮೯-೯೦ನೇ ಸಾಲಿನಲ್ಲಿ ಇನ್ನೂ ೪,೦೦೦ ಹೆಕ್ಟೇರ್‌ಗಳಷ್ಟು ಭೂಮಿಯಲ್ಲಿ ಉಪ್ಪುನೇರಳೆ ಬೆಳೆಸಲು ಉದ್ದೇಶಿಸಲಾಗಿದೆ, ೧೯೮೯-೯೦ನೇ ಸಾಲಿನಲ್ಲಿ ೧೧೨.೩೯ ಲಕ್ಷ ರೂಪಾಯಿ ಪ್ರಾರಂಭಿಕ ವೆಚ್ಚದೊಂದಿಗೆ, ವಿಶ್ವ ಬ್ಯಾಂಕು ನೆರವಿನ ಕರ್ನಾಟಕ ರೇಷ್ಮೆ ವ್ಯವಸಾಯ ಯೋಜನೆ ಹಂತ-IIರ ಅನುಷ್ಠಾನ ಕಾರ್ಯವನ್ನು ನಾವು ಪ್ರಾರಂಭಿಸಲಿದ್ದೇವೆ.

ವಿದ್ಯುಚ್ಛಕ್ತಿ

೩೫. ಕಳೆದ ಹಲವು ವರ್ಷಗಳಿಂದಲೂ ವಿದ್ಯುತ್ ವಲಯಕ್ಕೆ ವಿಶೇಷ ಒತ್ತು ನೀಡುತ್ತಾ ಬಂದಿದ್ದೇವೆ. ವಿದ್ಯುತ್ ವಲಯಕ್ಕೆ ೬ನೇ ಯೋಜನೆಯಲ್ಲಿ ೯೧೧.೫೪ ಕೋಟಿ ರೂಪಾಯಿ ಹಂಚಿಕೆ ಮಾಡಲಾಗಿದೆ. ೭ನೇ ಯೋಜನೆಯಲ್ಲಿ ಇದಕ್ಕೆ ೭೧೮.೦೮ ಕೋಟಿ ರೂಪಾಯಿ ಹಂಚಿಕೆ ಮಾಡಲಾಗಿತ್ತು. ಈ ದಿಸೆಯಲ್ಲಿನ ನಮ್ಮ ಪ್ರಯತ್ನಗಳನ್ನು ಸರಳಗೊಳಿಸುವ ದೃಷ್ಟಿಯಿಂದ ೧೯೮೮-೮೯ನೇ ಸಾಲಿನಲ್ಲಿ ಹೊಸ ವಿದ್ಯುಚ್ಛಕ್ತಿ ಇಲಾಖೆಯೊಂದನ್ನು ರಚಿಸಿದ್ದೇವೆ. ಈ ಇಲಾಖೆಯು ಸಾಂಪ್ರದಾಯಿಕ ವಿದ್ಯುತ್ ಉತ್ಪಾದನೆ ಹಾಗೂ ವಿದ್ಯುತ್ ವಿತರಣಾ ಕಾರ್ಯಗಳಲ್ಲದೆ. ಸಾಂಪ್ರದಾಯಿಕವಲ್ಲದ ಶಕ್ತಿ ಮೂಲಗಳನ್ನು ಕುರಿತು ಸರ್ಕಾರದ ಕಾರ್ಯಚಟುವಟಿಕೆಗಳನ್ನೂ ನೋಡಿಕೊಳ್ಳುತ್ತದೆ.

೩೬. ೧೯೮೯-೯೦ನೇ ಸಾಲಿನಲ್ಲಿ ವಿದ್ಯುತ್ ವಲಯಕ್ಕೆ ೨೭೫.೦೭ ಕೋಟಿ ರೂಪಾಯಿ ಯೋಜನೆಯನ್ನು ರೂಪಿಸಲಾಗಿದೆ. ಇದು ಪ್ರಸಕ್ತ ವರ್ಷದ ಪರಿಷ್ಕೃತ ವೆಚ್ಚಕ್ಕಿಂತ ಸುಮಾರು ಶೇಕಡಾ ೫೦ರಷ್ಟು ಹೆಚ್ಚಿನದಾಗಿದೆ. ಕರ್ನಾಟಕ ವಿದ್ಯುತ್ ನಿಗಮ, ನಿಯಮಿತ ಈಗ ಕೈಗೊಂಡಿರುವ ವಿದ್ಯುಚ್ಛಕ್ತಿ ಯೋಜನೆಗಳು ಏಳನೇ ಯೋಜನೆಯ ಇನ್ನುಳಿದ ಅವಧಿಯಲ್ಲಿ ರಾಜ್ಯದ ವಿದ್ಯುತ್ ಜಾಲಕ್ಕೆ ೨೫೦ ಮೆಗಾವಾಟ್ ವಿದ್ಯುತ್ತನ್ನು ಒದಗಿಸಲಿವೆ. ಈ ಯೋಜನೆಯ ಅವಧಿಯಲ್ಲಿ, ಈಗಾಗಲೇ ಒದಗಿಸಿರುವ ೩೧೦ ಮೆಗಾವಾಟ್ ವಿದ್ಯುತ್ತಿಗೆ ಇದು ಹೆಚ್ಚಿಗೆಯಾಗಿ ಸೇರಿದಂತಾಗುತ್ತದೆ. ರಾಯಚೂರು ಶಾಖೋತ್ಪನ್ನ ವಿದ್ಯುತ್ ಯೋಜನೆಯ ಘಟಕ-III-೧೯೯೧-೯೨ರಲ್ಲಿ ಕಾರ್ಯಾರಂಭವಾಗುವ ನಿರೀಕ್ಷೆಯಿದ್ದು, ಘಟಕ-IV-ಅನಂತರದ ವರ್ಷದಲ್ಲಿ ಕಾರ್ಯ ಪ್ರಾರಂಭಿಸಲಿದೆ. ರಾಯಚೂರಿನ ಮೊದಲ ಎರಡು ಘಟಕಗಳಲ್ಲಿ ವಿದ್ಯುತ್ ಉತ್ಪಾದನ ಗರಿಷ್ಠ ಪ್ರಮಾಣದಲ್ಲಿ ಆಗಿದೆ ಎಂಬುದನ್ನು ತಿಳಿಸಲು ನನಗೆ ಹರ್ಷವೆನಿಸಿದೆ. ಇದರಿಂದ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಭಾರತ ಸರ್ಕಾರದ ಪ್ರಶಸ್ತಿಗೆ ಅರ್ಹವಾಗಿದೆ. ರಾಯಚೂರು ಶಾಖೋತ್ಪನ್ನ ವಿದ್ಯುತ್ ಯೋಜನೆಯ ಘಟಕ-IVಕ್ಕೆ ಆರ್ಥಿಕ ನೆರವು ಪಡೆಯುವ ಸಲುವಾಗಿ ಜಪಾನಿನ ಒ.ಇ.ಸಿ.ಎಫ್. ಕಂಪನಿಯೊಂದಿಗೆ ಒಪ್ಪಂದವನ್ನು ಅಂತಿಮಗೊಳಿಸಲಾಗಿದೆ.

೩೭. ಕಾಳಿ ನದಿ ಜಲ ವಿದ್ಯುತ್ ಯೋಜನೆಯ ಹಂತ-IIರ ಕಾರ್ಯ ಉತ್ತಮ ಪ್ರಗತಿಯಲ್ಲಿದೆ. ವಿಶ್ವ ಬ್ಯಾಂಕು ಮತ್ತು ಕುವೈತ್ ಫಂಡ್ ಫಾರ್ ಅರಬ್ ಇಕನಾಮಿಕ್ ಡೆವಲಪ್‌ಮೆಂಟ್‌ನ ಆರ್ಥಿಕ ನೆರವಿನೊಂದಿಗೆ ಈ ಯೋಜನೆಯು ೧೯೯೩-೯೪ರ ವೇಳೆಗೆ ಮುಗಿಯುವ ನಿರೀಕ್ಷೆಯಿದೆ. ವಾರಾಹಿ ಯೋಜನೆಯ ಉಭಯ ಘಟಕಗಳು ೧೯೮೯-೯೦ರಲ್ಲಿ ಕಾರ್ಯಾರಂಭ ಮಾಡುವ ನಿರೀಕ್ಷೆಯಿದ್ದು,

ನಮ್ಮ ಈಗಿನ ವಿದ್ಯುತ್ ಉತ್ಪಾದನೆಗೆ ಇದರಿಂದ ೧.೧೩೦ ದಶಲಕ್ಷ ಯೂನಿಟ್ ವಿದ್ಯುತ್ ಲಭ್ಯವಾಗಲಿದೆ. ಶಿವನಸಮುದ್ರ ಕೇಂದ್ರದಲ್ಲಿ ೨೨೦ ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಯೋಜನೆಯೊಂದನ್ನು ತಯಾರಿಸಿ, ಭಾರತ ಸರ್ಕಾರದ ಅನುಮೋದನೆಗಾಗಿ ಕಳುಹಿಸಿ ಕೊಡಲಾಗಿದೆ. ೩೬೦ ಮೆಗಾವಾಟ್ ವಿದ್ಯುತ್ ಉತ್ಪಾದನೆಗಾಗಿ ಮೇಕೆದಾಟು ಯೋಜನೆ ಮತ್ತು ೪೦೦ ಮೆಗಾವಾಟ್ ವಿದ್ಯುತ್ ಉತ್ಪಾದನೆಗಾಗಿ ಕಾಳಿನದಿ ಜಲ ವಿದ್ಯುತ್ ಯೋಜನೆ ಹಂತ-IIIಕ್ಕೆ ಸಂಬಂಧಿಸಿದಂತೆ ಕರ್ನಾಟಕ ವಿದ್ಯುತ್ ನಿಗಮವು ಯೋಜನಾ ವರದಿಗಳನ್ನು ಸಿದ್ಧಪಡಿಸುತ್ತಿದೆ. ಈ ನಿಗಮದ ೧೯೮೮–೮೯ರ ಅಂತಿಮ ವೆಚ್ಚ ೧೨೨ ಕೋಟಿ ರೂಪಾಯಿಯಾಗುವ ನಿರೀಕ್ಷೆಯಿದೆ. ೧೯೮೯–೯೦ರಲ್ಲಿ ಇದನ್ನು ೧೬೩.೯೫ ಕೋಟಿ ರೂಪಾಯಿಗೆ ಏರಿಸಲಾಗುವುದು.

೩೮. ೧೯೮೧ರ ಜನಗಣತಿ ಪ್ರಕಾರ ಎಲ್ಲಾ ಮುಖ್ಯ ಗ್ರಾಮಗಳಿಗೆ ೧೯೮೯ರ ಮಾರ್ಚ್ ತಿಂಗಳ ಅಂತ್ಯದೊಳಗೆ ವಿದ್ಯುತ್ ಒದಗಿಸಲಾಗುವುದೆಂದು ತಿಳಿಸಲು ನನಗೆ ಸಂತೋಷವಾಗುತ್ತದೆ. ೧೯೮೯–೯೦ರ ಸಾಲಿನಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ವಿದ್ಯುದೀಕರಣ ಕಾರ್ಯಕ್ರಮದಲ್ಲಿ ೬೦೦ ಸಣ್ಣ ಹಳ್ಳಿಗಳು, ೯೦೦ ಹರಿಜನ ಬಸ್ತಿಗಳು ಮತ್ತು ೩೦ ಬುಡಕಟ್ಟು ಕಾಲೋನಿಗಳು ಒಳಗೊಳ್ಳಲಿವೆ. ಭಾಗ್ಯ ಜ್ಯೋತಿ ಯೋಜನೆ ಮೇರೆಗೆ, ೨೫.೦೦೦ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು ಮತ್ತು ಮುಂದಿನ ವರ್ಷ ೪೨,೦೦೦ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸುವ ಉದ್ದೇಶವಿದೆ. ಮಂಡಳಿಯ ೧೯೮೮–೮೯ರ ಯೋಜನಾ ಕಾರ್ಯಕ್ರಮವು ೬೫.೧೦ ಕೋಟಿ ರೂಪಾಯಿ ವೆಚ್ಚದ್ದಾಗಿರುತ್ತದೆ. ೧೯೮೯–೯೦ರಲ್ಲಿ ಕರ್ನಾಟಕ ವಿದ್ಯುತ್ ಮಂಡಳಿಯ ಒಟ್ಟು ಯೋಜನಾ ಹಂಚಿಕೆ ೧೦೨.೧೦ ಕೋಟಿ ರೂಪಾಯಿಯಾಗಿರುತ್ತದೆ.

ನೀರಾವರಿ

೩೯. ಭಾರಿ ನೀರಾವರಿ ಸಂಬಂಧದಲ್ಲಿ ನಮ್ಮ ಪ್ರಮುಖ ಗುರಿಯೇನೆಂದರೆ ಈ ಶತಮಾನದ ಅಂತ್ಯದೊಳಗೆ ಜಲಾಶಯಗಳಲ್ಲಿ ಸಂಗ್ರಹಿಸಿಟ್ಟಿರುವ ನೀರನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳುವುದು ಹಾಗೂ ನಮ್ಮ ಪಾಲಿನ ನದಿ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳುವುದು. ೧೯೮೮–೮೯ರಲ್ಲಿ ನೀರಾವರಿ ಮತ್ತು ಪ್ರವಾಹ ನಿಯಂತ್ರಣಕ್ಕೆ ಸಂಬಂಧಿಸಿದ ಯೋಜನಾ ವೆಚ್ಚವು ೧೩೪.೧೮ ಕೋಟಿ ರೂಪಾಯಿಗಳಷ್ಟಿರುತ್ತದೆ. ಇದಕ್ಕೆ ಪ್ರತಿಯಾಗಿ ೧೯೮೯–೯೦ರಲ್ಲಿ ೨೧೯.೪೦ ಕೋಟಿ ರೂಪಾಯಿಗಳ ಮೊಬಲಗನ್ನು ನಾವು ಒದಗಿಸಿದ್ದೇವೆ. ಇದರಲ್ಲಿ ಭಾರಿ ನೀರಾವರಿಗಾಗಿ ೧೫೫.೩೧ ಕೋಟಿ ರೂಪಾಯಿ. ಸಣ್ಣ ನೀರಾವರಿಗಾಗಿ ೪೪.೬೧ ಕೋಟಿ ರೂಪಾಯಿ ಕಾಡಾ (ಸಿಎಡಿಎ) ಯೋಜನೆಗಾಗಿ ೧೮.೫೯ ಕೋಟಿ ರೂಪಾಯಿ ಮತ್ತು ಪ್ರವಾಹ ನಿಯಂತ್ರಣ ಯೋಜನೆಗೆ ೦.೮೯ ಕೋಟಿ ರೂಪಾಯಿ ಒದಗಿಸಲಾಗಿದೆ. ನೀರಾವರಿಯ ಮೇಲಣ ನಮ್ಮ ಒಟ್ಟು ವೆಚ್ಚಗಳನ್ನು ಹೆಚ್ಚಿಸುವಲ್ಲಿ ನಿಧಿಗಳ ಕೊರತೆಯು ಒಂದು ನಿರ್ಬಂಧವಾಗಿದೆ. ಎನ್‌ಟಿಪಿಸಿ ಬಂಧಪತ್ರಗಳು, ರೈಲ್ವೆ ಬಂಧಪತ್ರಗಳು ಮೊದಲಾದುವುಗಳಂತೆಯೇ ನೀರಾವರಿ ಬಂಧಪತ್ರಗಳನ್ನು ನೀಡಿ ಹಣ ಸಾಲ ಪಡೆಯುವುದಕ್ಕೆ ನಮಗೆ ಅನುಮತಿ ನೀಡಬೇಕೆಂದು ಭಾರತ ಸರ್ಕಾರವನ್ನು ನಾನು ಕೇಳುತ್ತಲೇ ಬಂದಿದ್ದೇನೆ. ಈ ಸಂಬಂಧದಲ್ಲಿ ಮತ್ತೆ ಭಾರತ ಸರ್ಕಾರವನ್ನು ನಾನು ಒತ್ತಾಯಿಸಿದ್ದೇನೆ.

೪೦. ಕೃಷ್ಣಾ ಮೇಲ್ದಂಡೆ ಯೋಜನೆ IIನೇ ಹಂತಕ್ಕಾಗಿ ೫೦೦ ಕೋಟಿ ರೂಪಾಯಿಗಳ ವಿದೇಶಿ ನೆರವನ್ನು ೬½ ವರ್ಷಗಳ ಅವಧಿಯಲ್ಲಿ ಪಡೆಯುವ ನಿರೀಕ್ಷೆ ಇದೆ. ಯೋಜನೆಯ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು, ಪ್ರಸ್ತುತ ವರ್ಷದಲ್ಲಿ ೫೦.೧೯ ಕೋಟಿ ರೂಪಾಯಿಗಳ ನಿರೀಕ್ಷಿತ ವೆಚ್ಚಕ್ಕೆ ಪ್ರತಿಯಾಗಿ, ೧೯೮೯–೯೦ರಲ್ಲಿ ೬೨ ಕೋಟಿ ರೂಪಾಯಿಗಳನ್ನು ನಾನು ಹಂಚಿಕೆ ಮಾಡಿದ್ದೇನೆ. ಕಾವೇರಿಕಣಿವೆ ಯೋಜನೆಗಳಿಗಾಗಿ, ನಾವು ಇನ್ನೂ ಯೋಜನೇತರ ಅಡಿಯಲ್ಲಿಯೇ ಭಾರಿಮೊತ್ತವನ್ನು ಒದಗಿಸುತ್ತಿರುವುದು ಮಾನ್ಯ ಸದಸ್ಯರಿಗೆ ತಿಳಿದೇ ಇದೆ. ೧೯೮೮–೮೯ರಲ್ಲಿ ೬೦ ಕೋಟಿ ರೂಪಾಯಿಗಳ ನಿರೀಕ್ಷಿತ ವೆಚ್ಚಕ್ಕೆ ಪ್ರತಿಯಾಗಿ ೧೯೮೯–೯೦ರಲ್ಲಿ ನಾವು ಕಾವೇರಿ ಕಣಿವೆ ಯೋಜನೆಗಳಿಗಾಗಿನ ಹಂಚಿಕೆಯನ್ನು ೧೦೦ ಕೋಟಿ ರೂಪಾಯಿಗಳಿಗೆ ಏರಿಸಿದ್ದೇವೆ. ೧೯೮೯–೯೦ರಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಬಿಟ್ಟು, ಕೃಷ್ಣಾ ಕಣಿವೆ ಯೋಜನೆಗಾಗಿ ೫೫.೩೦ ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಆದ್ದರಿಂದ, ಗ್ರಾಮೀಣ ಪ್ರದೇಶಗಳ ಪ್ರಯೋಜನಕ್ಕಾಗಿ ಜಲ ಸಂಪನ್ಮೂಲಗಳ ಅಭಿವೃದ್ಧಿಗೆ ಸಾಕಷ್ಟು ನಿಧಿಗಳನ್ನು ಒದಗಿಸುತ್ತೇವೆಂಬ ನಮ್ಮ ಘೋಷಿತ ನೀತಿಗನುಸಾರವಾಗಿ, ನೀರಾವರಿ ಮತ್ತು ಪ್ರವಾಹ ನಿಯಂತ್ರಣಕ್ಕಾಗಿ ೩೧೯.೪೦ ಕೋಟಿ ರೂಪಾಯಿಯಷ್ಟು ಹಣವನ್ನು ನಾನು ಹಂಚಿಕೆ ಮಾಡಿದ್ದೇನೆ.

ಗೃಹ ನಿರ್ಮಾಣ

೪೧. ಗ್ರಾಮೀಣ ಪ್ರದೇಶಗಳಲ್ಲಿ, ಜನತಾ ಗೃಹ ಯೋಜನೆಯು ೧೯೮೮–೮೯ ರಲ್ಲಿ ೫೩,೮೨೪ ಹೊಸ ಫಲಾನುಭವಿಗಳನ್ನು ಒಳಗೊಳ್ಳುತ್ತದೆ. ದಿವಂಗತ ಶ್ರೀ ನಜೀರ್‌ಸಾಬ್ ಅವರು ನಮ್ಮ ರಾಜ್ಯದಲ್ಲಿ ಗ್ರಾಮೀಣ ಅಭಿವೃದ್ಧಿಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು. ಪ್ರಜಾ ಪ್ರಭುತ್ವದ ವಿಕೇಂದ್ರೀಕರಣ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಗೃಹ ನಿರ್ಮಾಣ ಹಾಗೂ ಕುಡಿಯುವ ನೀರಿನ ಸರಬರಾಜಿಗಾಗಿ ಅವರು ನೀಡಿದ ಕೊಡುಗೆಯು ಚಿರಪರಿಚಿತವಾದ ವಿಷಯವಾಗಿದೆ. ಅವರ ಸೇವೆಯ ಸ್ಮರಣಾರ್ಥವಾಗಿ, ಗ್ರಾಮೀಣ ಅಭಿವೃದ್ಧಿಗಾಗಿ ಒದಗಿಸಲಾದ ನಿಧಿಯನ್ನು ಬಳಸಿಕೊಂಡು ೧೯೮೯–೯೦ನೇ ಸಾಲಿನಲ್ಲಿ "ನಜೀರ್ ನಿವಾಸ ಯೋಜನೆ"ಯ ಅಡಿಯಲ್ಲಿ ಪ್ರತಿ ತಾಲ್ಲೂಕಿಗೆ ೧೦೦ ಮನೆಗಳಂತೆ ೧೭,೫೦೦ ಮನೆಗಳನ್ನು ನಿರ್ಮಿಸಲು ನಾವು ಪ್ರಸ್ತಾವಿಸಿದ್ದೇವೆ.

೪೨. ೧೯೮೯–೯೦ ರಲ್ಲಿ, ಗೃಹನಿರ್ಮಾಣ ಯೋಜನೆಗೆ ಹೆಚ್ಚಿನ ಉತ್ತೇಜನ ನೀಡಬೇಕೆಂದು ನಾನು ಉದ್ದೇಶಿಸಿದ್ದೇನೆ. ಕರ್ನಾಟಕ ಗೃಹ ನಿರ್ಮಾಣ ಮಂಡಳಿಯು ಈ ವರ್ಷ ೧೦,೦೦೦ಗೃಹಗಳನ್ನು ನಿರ್ಮಿಸುವ ಯೋಜನೆಯನ್ನು ಕೈಗೆತ್ತಿಕೊಳ್ಳುತ್ತದೆ. ಈ ಮನೆಗಳ ಪೈಕಿ ಶೇಕಡ ೭೦ರಷ್ಟು ಆರ್ಥಿಕವಾಗಿ ದುರ್ಬಲರಾದ ವರ್ಗದವರಿಗೆ ಮತ್ತು ಕಡಿಮೆ ಆದಾಯ ವರ್ಗದ ಜನರಿಗಾಗಿ ಇರುತ್ತವೆ. ಇದು ೩೫ ಕೋಟಿ ರೂಪಾಯಿಗಳ ವೆಚ್ಚವನ್ನು ಒಳಗೊಂಡಿದೆ. ಹಂಡ್ಕೊ ಮತ್ತು ಇತರೆ ಹಣಕಾಸು ಸಂಸ್ಥೆಗಳು ಇದಕ್ಕೆ ಹಣ ಒದಗಿಸುತ್ತವೆ.

ನಗರಾಭಿವೃದ್ಧಿ

೪೩. ನಗರಾಭಿವೃದ್ಧಿ ಯೋಜನೆಯ ಒಂದು ಪ್ರಮುಖ ಕಾರ್ಯಕ್ರಮವನ್ನು ವಿಶ್ವಬ್ಯಾಂಕಿನ ನೆರವಿನೊಂದಿಗೆ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ಕರ್ನಾಟಕ ನಗರಾಭಿವೃದ್ಧಿ ಯೋಜನೆಯು ಎರಡು ಘಟಕಗಳನ್ನು ಹೊಂದಿರುತ್ತದೆ.

(ಎ) ಎಲ್ಲಾ ಮೂಲಭೂತ ಸೌಲಭ್ಯಗಳುಳ್ಳ ನಿವೇಶನಗಳ ನೀಡಿಕೆ ಹಾಗೂ ಕೊಳಚೆ ಪ್ರದೇಶಗಳ ಅಭಿವೃದ್ಧಿ ;

(ಬಿ) ನಗರ ಸಾರಿಗೆ ಯೋಜನೆ : ನಿವೇಶನಗಳ ನೀಡಿಕೆ ಮತ್ತು ಕೊಳಚೆ ಪ್ರದೇಶಗಳ ಅಭಿವೃದ್ಧಿ ಯೋಜನೆಯನ್ನು ಮೊದಲ ಹಂತದಲ್ಲಿ ಬೆಂಗಳೂರು ನಗರ, ಹುಬ್ಬಳ್ಳಿ–ಧಾರವಾಡ ಮತ್ತು ಗುಲ್ಬರ್ಗಾಗಳಲ್ಲಿ ಜಾರಿಗೊಳಿಸಲಾಗುವುದು ಮತ್ತು ಈ ಯೋಜನೆಯನ್ನು ಇತರೆ ೭ ನಗರ ಪ್ರದೇಶಗಳಿಗೂ ವಿಸ್ತರಿಸುವ ಸಂಭವವಿದೆ. ನಗರ ಸಾರಿಗೆ ಯೋಜನೆಯನ್ನು ಬೆಂಗಳೂರಿನಲ್ಲಿ ಕೈಗೊಳ್ಳಲಾಗುವುದು.

೪೪. ನಿವೇಶನಗಳು ಮತ್ತು ಸೇವೆಗಳ ಯೋಜನೆಯು ಸುಮಾರು ೫೫,೦೦೦ ನಿವೇಶನಗಳನ್ನು ಮುಖ್ಯವಾಗಿ ಆರ್ಥಿಕವಾಗಿ ಹಿಂದುಳಿದ ವರ್ಗದವರಿಗಾಗಿ ಏರ್ಪಾಡು ಮಾಡಬೇಕೆಂಬ ಗುರಿಯನ್ನು ಇಟ್ಟುಕೊಂಡಿದೆ. ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಗೊಳಿಸುವ ಯೋಜನೆಯಲ್ಲಿ ಮೂರು ನಗರಗಳಲ್ಲಿನ ೨,೦೦,೦೦೦ ಕೊಳಚೆ ನಿವಾಸಿಗಳು ಒಳಗೊಳ್ಳುತ್ತಾರೆ.

೪೫. ಬೆಂಗಳೂರು ನಗರ ಸಾರಿಗೆ ಯೋಜನೆಯಡಿಯಲ್ಲಿ, ಬಸ್ಸುಗಳ ಸಂಖ್ಯೆಯನ್ನು ಹೆಚ್ಚಿಸುವ ಕೇಂದ್ರ ಬಸ್ ನಿಲ್ದಾಣಗಳನ್ನು, ಬಸ್ ಟರ್ಮಿನಲ್‌ಗಳನ್ನು, ಡಿಪೊ ಇತ್ಯಾದಿಗಳನ್ನು ಸ್ಥಾಪಿಸುವ ವಿಷಯವನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಬೆಂಗಳೂರು ನಗರದಲ್ಲಿ ರಸ್ತೆ ಜಾಲವನ್ನು ಅಭಿವೃದ್ಧಿಗೊಳಿಸಲಾಗುವುದು. ಈ ಯೋಜನೆಯನ್ನು ೧೯೮೯–೯೦ರಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ, ಮತ್ತು ಇದನ್ನು ಐದು ವರ್ಷಗಳ ಅವಧಿಯಲ್ಲಿ ಜಾರಿಗೊಳಿಸಲಾಗುವುದು.

ನೀರು ಸರಬರಾಜು

೪೬. ೧೯೮೯–೯೦ರಲ್ಲಿ ಸಣ್ಣ ನಗರಗಳಲ್ಲಿ ನೀರುಸರಬರಾಜಿನ ಸೌಲಭ್ಯ ಒದಗಿಸಿಕೊಡುವ ಬಗ್ಗೆ ಉತ್ತೇಜನ ನೀಡಲಾಗುವುದು. ಪ್ರಗತಿಯಲ್ಲಿರುವ ಯೋಜನೆಗಳನ್ನು ಶೀಘ್ರವಾಗಿ ಪೂರ್ಣಗೊಳಿಸುವ ಸಲುವಾಗಿ ೧೯೮೮–೮೯ರಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಗೆ ಒದಗಿಸಲಾದ ೯.೮೫ ಕೋಟಿ ರೂಪಾಯಿಗಳಿಗೆ ಹೆಚ್ಚಿಗೆಯಾಗಿ ಈ ವರ್ಷ ೭ ಕೋಟಿ ರೂಪಾಯಿಗಳನ್ನು

ಒದಗಿಸಲಾಗುತ್ತಿದೆ. ೧೯೮೯-೯೦ ರಲ್ಲಿ ಈ ಮೊತ್ತವನ್ನು ೨೦,೧೪ ಕೋಟಿ ರೂಪಾಯಿಗಳವರೆಗೆ ಮತ್ತಷ್ಟು ಹೆಚ್ಚಿಸಲಾಗಿದೆ. ಮಂಡಲಿಯು ಇನ್ನೂ ಆರು ನೀರು ಸರಬರಾಜು ಯೋಜನೆಗಳನ್ನು ಕೈಗೊಳ್ಳುವುದು. ಅವನ್ನು ಅನುಬಂಧ-III ರಲ್ಲಿ ನೀಡಲಾಗಿದೆ.

ಗ್ರಾಮ ನೈರ್ಮಲ್ಯ

೪೭. ಇದುವರೆಗೆ ಹಲವಾರು ಯೋಜನೆಗಳನ್ನು ಕೈಗೊಂಡಿದ್ದಾಗ್ಯೂ, ಗ್ರಾಮ ನೈರ್ಮಲ್ಯ ಯೋಜನೆಯಲ್ಲಿ ಗಣನೀಯ ಸುಧಾರಣೆ ಕಂಡುಬಂದಿಲ್ಲ. ಈ ಕ್ಷೇತ್ರಕ್ಕೆ ನಾವು ಇನ್ನು ಮುಂದೆ ಇನ್ನೂ ಹೆಚ್ಚಿನ ಒತ್ತನ್ನು ನೀಡಲಿಚ್ಛಿಸುತ್ತೇವೆ. ೧೯೮೯-೯೦ ರಲ್ಲಿ ಪ್ರತಿಯೊಂದು ಮಂಡಲದ ಒಂದು ಗ್ರಾಮಕ್ಕೆ ''ಶೌಚಾಲಯಗಳನ್ನು'' ತೆರೆದು ಚರಂಡಿಗಳನ್ನು ಮತ್ತು ರಸ್ತೆಗಳನ್ನು ನಿರ್ಮಿಸಿಕೊಡುವ ಮೂಲಕ ೨೫೦೦ ಗ್ರಾಮಂಗಳಿಗೆ ನೈರ್ಮಲ್ಯ ಸೌಲಭ್ಯ ಒದಗಿಸಲಾಗುವುದು. ಇದು ಗ್ರಾಮೀಣ ಪ್ರದೇಶಗಳ ಜನಜೀವನದ ಗುಣಮಟ್ಟವನ್ನು ಬಹಳಷ್ಟು ಸುಧಾರಿಸುತ್ತದೆ. ಎಂದು ನಾವು ನಂಬಿದ್ದೇವೆ. ಹತ್ತು ವರ್ಷಗಳಲ್ಲಿ ಎಲ್ಲ ಗ್ರಾಮಗಳಲ್ಲಿ ಈ ಕಾರ್ಯಕ್ರಮವನ್ನು ಜಾರಿಗೆ ತರಲಾಗುವುದು.

ಆರೋಗ್ಯ

೪೮. ೭ನೇ ಯೋಜನೆಯಲ್ಲಿ ೭೭೪ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವ ಗುರಿ ಇಟ್ಟುಕೊಂಡಿದ್ದೇವೆ. ಈವರೆಗೆ ೪೨೧ ಕೇಂದ್ರಗಳನ್ನು ನಾವು ಪ್ರಾರಂಭಿಸಿದ್ದೇವೆ. ೧೯೮೯-೯೦ರಲ್ಲಿ ಉಳಿದ ೩೫೩ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು.

೪೯. ಆರೋಗ್ಯವಲಯದಲ್ಲಿ ಮಾನಸಿಕ ಆರೋಗ್ಯ, ಅರ್ಬುದ ರೋಗ ಶಾಸ್ತ್ರ, ಹೃದ್ರೋಗ ಶಾಸ್ತ್ರ, ಮುಂತಾದವುಗಳಿಗಾಗಿಯೇ ವಿಶೇಷವಾಗಿ ಸಜ್ಜುಗೊಳಿಸಲಾದ ಸಂಸ್ಥೆಗಳನ್ನು ನಾವು ಈಗಾಗಲೇ ಹೊಂದಿದ್ದೇವೆ. ೧೯೮೯-೯೦ರಲ್ಲಿ ಮಕ್ಕಳ ಆರೋಗ್ಯ ರಕ್ಷಣೆಗಾಗಿ ವಿಶೇಷವಾಗಿ ಸಜ್ಜುಗೊಳಿಸಲಾದ ಮಕ್ಕಳ ಆರೋಗ್ಯ ಸಂಸ್ಥೆಯೊಂದನ್ನು ಸ್ಥಾಪಿಸಲು ನಾನು ಉದ್ದೇಶಿಸಿದ್ದೇನೆ. ಅಪಘಾತಕ್ಕೀಡದವರಿಗೆ ಉತ್ತಮ ಸೇವೆಸಲ್ಲಿಸುತ್ತಿರುವ ಟ್ರುಮೆಟಾಲಜಿ ಸಂಸ್ಥೆಯನ್ನು ಬಲಪಡಿಸಲು ಉದ್ದೇಶಿಸಿದೆ.

ಶಿಕ್ಷಣ

೫೦. ಕಳೆದ ಕೆಲವು ವರ್ಷಗಳಿಂದ ರಾಜ್ಯದಲ್ಲಿ ಶೈಕ್ಷಣಿಕ ಸೇವೆಯ ಏರ್ಪಾಡಿಗಾಗಿ ಆಗುವ ವೆಚ್ಚ ವಿಪರೀತ ಹೆಚ್ಚಿದೆ. ೧೯೮೩-೮೪ನೇ ವರ್ಷದಲ್ಲಿ, ಯೋಜನೆ ಮತ್ತು ಯೋಜನೇತರಗಳೆರಡನ್ನೂ ಒಳಗೊಂಡಂತೆ ನಾವು ಶಿಕ್ಷಣದ ಮೇಲೆ ಮಾಡಲಾದ ಒಟ್ಟು ವೆಚ್ಚ ೨೬೪.೪೩ ಕೋಟಿ ರೂಪಾಯಿ, ೧೯೮೯-೯೦ರಲ್ಲಿ ಇದು ೭೭೧.೯ ಕೋಟಿ ರೂಪಾಯಿಗಳಾಗುವುದೆಂಬ ನಿರೀಕ್ಷೆಯಿದೆ. ಪ್ರಾಥಮಿಕ ಶಿಕ್ಷಣ ಮತ್ತು ವಯಸ್ಕರ ಸಾಕ್ಷರತೆಯನ್ನು ಸಾರ್ವತ್ರಿಕಗೊಳಿಸುವ ಗುರಿಯನ್ನು ಜೊತೆ ಜೊತೆಯಲ್ಲಿಯೇ ಸಾಧಿಸುವ ಸಲುವಾಗಿ, ಪದ್ಧತಿಯೇತರ ಶಿಕ್ಷಣ ಮತ್ತು ವಯಸ್ಕರ ಶಿಕ್ಷಣ ಯೋಜನೆಗಳನ್ನು ವಿಲೀನಗೊಳಿಸುವ ಮೂಲಕ ಈ ವರ್ಷದಲ್ಲಿ ಸಮೂಹ ಶಿಕ್ಷಣ ನಿರ್ದೇಶನಾಲಯವನ್ನು ಸ್ಥಾಪಿಸಲಾಗಿದೆ. ೧೯೮೬ರ ಜನವರಿ ೧ನೇ ದಿನಾಂಕದಿಂದ ಜಾರಿಗೆ ಬರುವಂತೆ ಯುಜಿಸಿ ವೇತನ ಶ್ರೇಣಿಗಳನ್ನು ವಿಶ್ವವಿದ್ಯಾನಿಲಯಗಳ ಉಪಾಧ್ಯಾಯರುಗಳಿಗೆ ನೀಡಿದ್ದೇವೆ.

೫೧. ೧೯೮೩ರ ಜುಲೈ ೧೧ ರಿಂದ ಜಾರಿಗೆ ಬಂದಿರುವ ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಕ್ಯಾಪಿಟೇಷನ್ ಶುಲ್ಕದ ನಿಷೇಧ) ಅಧಿನಿಯಮ ೧೯೮೪, ಇದು ಆ ದಿನಾಂಕದಿಂದ ಐದು ವರ್ಷಗಳ ಮುಕ್ತಾಯದ ತರುವಾಯ ಶೈಕ್ಷಣಿಕ ಸಂಸ್ಥೆಗಳು ಕ್ಯಾಪಿಟೇಷನ್ ಶುಲ್ಕ ವಸೂಲಿ ಮಾಡುವುದನ್ನು ನಿಷೇಧಿಸುತ್ತದೆ. ಇನ್ನು ಮುಂದೆ ಯಾವುದೇ ಸಂಸ್ಥೆಯು ಕ್ಯಾಪಿಟೇಷನ್ ಶುಲ್ಕ ವಸೂಲಿ ಮಾಡುವುದನ್ನು ಅನುಮತಿಸುವುದಿಲ್ಲವೆಂದು ಸುಸ್ಪಷ್ಟವಾಗಿ ತಿಳಿಸಬಯಸುತ್ತೇನೆ. ಅಧಿನಿಯಮದ ಉಪಬಂಧಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಗುವುದು.

೫೨. ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವುದು ನಮ್ಮ ಉದ್ದೇಶ. ಈ ಗುರಿಯನ್ನು ಸಾಧಿಸುವ ಸಲುವಾಗಿ, ೨,೨೬೦ ಶಾಲಾ ಕೊಠಡಿಗಳ ನಿರ್ಮಾಣ ಕಾರ್ಯವನ್ನು ಕೈಗೊಂಡಿದ್ದೇವೆ. ಈ ವರ್ಷ ೬,೪೧೮ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಕ ಮಾಡಿಕೊಂಡಿದ್ದೇವೆ. ೧೯೮೯-೯೦ರಲ್ಲಿ ೩,೪೮೯ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಮತ್ತು ೫,೩೪೭ ಶಾಲಾ ಕೊಠಡಿಗಳನ್ನು ನಿರ್ಮಿಸಲು ನಾನು ಉದ್ದೇಶಿಸಿದ್ದೇನೆ.

ವಿದ್ಯಾವಿಕಾಸ ಯೋಜನೆಯು ಮೇರೆಗೆ ಪ್ರೋತ್ಸಾಹಕಗಳನ್ನು ಒದಗಿಸಿದ ಪರಿಣಾಮವಾಗಿ ಶಾಲೆಗೆ ಸೇರಿದಂಥ ವಿದ್ಯಾರ್ಥಿಗಳ ಸಂಖ್ಯೆ ೧೯೮೩-೮೪ರಲ್ಲಿ ೫೪ ಲಕ್ಷ ಇದ್ದುದು ೧೯೮೯-೯೦ರಲ್ಲಿ ೬೫ ಲಕ್ಷಕ್ಕೆ ಏರಿದೆ. ಶಾಲಾ ಕೊಠಡಿಗಳ ನಿರ್ಮಾಣ ಕಾರ್ಯವನ್ನು ಹೆಚ್ಚಿಸಬೇಕಾಗಿದೆ. ಆದ್ದರಿಂದ ಶಾಲಾ ಕೊಠಡಿಗಳ ನಿರ್ಮಾಣದ ವೆಚ್ಚಕ್ಕಾಗಿ, ಯಾವುದೇ ಗ್ರಾಮ ಶೇಕಡ ೫೦ರಷ್ಟು ಹಣವನ್ನು ದಾನವಾಗಿ ನೀಡಿದರೆ, ಉಳಿದ ಶೇಕಡ ೫೦ ರಷ್ಟು ಹಣವನ್ನು ಒದಗಿಸುವ ಮೂಲಕ ಸರ್ಕಾರ ಅವುಗಳ ನಿರ್ಮಾಣ ಕಾರ್ಯವನ್ನು ಆದ್ಯತೆಯ ಮೇಲೆ ಕೈಗೆತ್ತಿಕೊಳ್ಳುವ ಯೋಜನೆಯೊಂದನ್ನು ನಾನು ಪ್ರಸ್ತಾವಿಸುತ್ತೇನೆ.

ವಿಜ್ಞಾನ ಮತ್ತು ತಂತ್ರಜ್ಞಾನ

೫೩. ಇತ್ತೀಚಿನ ತಂತ್ರಜ್ಞಾನವು ಜನತೆಗೆ ಲಭ್ಯವಾಗುವಂತೆ ಮಾಡುವ ಸಲುವಾಗಿ ವಿಜ್ಞಾನ ಮತ್ತು ತಂತ್ರಜ್ಞಾನದ ಕರ್ನಾಟಕ ರಾಜ್ಯ ಪರಿಷತ್ತು ''ಅಸ್ತ್ರ ಒಲೆ'' ಮತ್ತು ಮರದ ಅನಿಲಕಾರಕಗಳಂಥ ಹಲವಾರು ನವೀನ ಯೋಜನೆಗಳನ್ನು ಕೈಗೊಳ್ಳುತ್ತಿದೆ. ಇದನ್ನು ರಾಜ್ಯಮಟ್ಟದಲ್ಲಿ ಮಾತ್ರ ಕೈಗೊಂಡರೆ ಸಾಲದು. ಜಿಲ್ಲಾಮಟ್ಟಗಳಲ್ಲಿ ಈ ನವೀನ ಶಕ್ತಿ ಮೂಲಗಳನ್ನು ಉಪಯೋಗಿಸಿಕೊಳ್ಳುವ ಸಲುವಾಗಿ ವಿಜ್ಞಾನ ಮತ್ತು ತಂತ್ರಜ್ಞಾನದ ಜಿಲ್ಲಾ ಮಟ್ಟದ ಪರಿಷತ್ತುಗಳನ್ನು ರಚಿಸಲು ನಾನು ಉದ್ದೇಶಿಸಿದ್ದೇನೆ. ಸರ್ಕಾರ ಮತ್ತು ವೈಜ್ಞಾನಿಕ ಸಂಸ್ಥೆಗಳ ನಡುವೆ ಉತ್ತಮ ಸಮನ್ವಯವನ್ನು ಕಲ್ಪಿಸುವ ಸಲುವಾಗಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕಾಗಿ ಒಂದು ಪ್ರತ್ಯೇಕ ಇಲಾಖೆಯನ್ನು ರಚಿಸಿದ್ದೇವೆಂಬ ಸಂಗತಿ ಮಾನ್ಯ ಸದಸ್ಯರಿಗೆ ಈಗಾಗಲೇ ತಿಳಿದಿದೆ.

ಪಂಚಾಯತ್ ರಾಜ್ಯ

೫೪. ರಾಷ್ಟ್ರಪಿತನ ''ಗ್ರಾಮ ರಾಜ್ಯ'' ಕಲ್ಪನೆಯನ್ನು ಅನುಸರಿಸಿ, ಜನತೆಯ ಕೈಗೆ ಅಧಿಕಾರ ನೀಡಲು ದೇಶದ ವಿವಿಧ ಭಾಗಗಳಲ್ಲಿ ಕೆಲವು ಪ್ರಯತ್ನಗಳನ್ನು ಕೈಗೊಳ್ಳಲಾಯಿತು. ಆದರೆ ಈ ಎಲ್ಲಾ ಪ್ರಯತ್ನಗಳ ಮೂಲಕ ಅಧಿಕಾರದ ಸಮಗ್ರ ವಿಕೇಂದ್ರೀಕರಣ ಪರಿಪೂರ್ಣವಾಗಲಿಲ್ಲ. ನೀತಿ ನಿರೂಪಕರ ಮನಸ್ಸಿನಲ್ಲಿ ಉಂಟಾದ ಸಂದೇಹ-ಭೀತಿಗಳೇ ಇದಕ್ಕೆ ಕಾರಣವಾಗಿರಬಹುದು. ಜನತೆಯ ಕೈಗೆ ಅಧಿಕಾರ ನೀಡುವ ಕನಸನ್ನು ನನಸು ಮಾಡಲು ಜಿಲ್ಲೆ ಮತ್ತು ಸ್ಥಳೀಯ ಮಟ್ಟಗಳಲ್ಲಿ ಕಾರ್ಯಕ್ರಮ ಮತ್ತು ಕಾರ್ಯನೀತಿಗಳನ್ನು ಕಾರ್ಯಗತಗೊಳಿಸುವ ದೃಷ್ಟಿಯಿಂದ ತಮ್ಮದೇ ಆದಂಥ ಸಂವಿಧಾನ, ಯೋಜನೆ ಹಾಗೂ ಆಯವ್ಯಯ ಮತ್ತು ಸ್ವಂತ ಏಜನ್ಸಿಗಳನ್ನೊಳಗೊಂಡಂತಹ ಸ್ವಯಂ ಪೂರ್ಣ ಸಂಸ್ಥೆಗಳನ್ನು ಸ್ಥಾಪಿಸುವುದರ ಮೂಲಕ ಚರಿತ್ರಾರ್ಹ ತೀರ್ಮಾನ ಕೈಗೊಂಡ ಕೀರ್ತಿ ಕರ್ನಾಟಕಕ್ಕೆ ಸಲ್ಲಬೇಕು. ಸ್ವಯಂ ಆಡಳಿತದ ಬುನಾದಿಯ ವಿಸ್ತರಣೆಗೆ ಕೈಗೊಂಡ ಇನ್ನೊಂದು ನಿರ್ಣಾಯಕ ನಿರ್ಧಾರ ಎಂದರೆ, ಮತದಾನದ ಹಕ್ಕನ್ನು ೨೧ ರಿಂದ ೧೮ಕ್ಕೆ ಇಳಿಸಿರುವುದು ಮತ್ತು ಮಹಿಳೆಯರಿಗಾಗಿ ಶೇಕಡ ೨೫ ರಷ್ಟು ಸ್ಥಾನಗಳನ್ನು ಮೀಸಲಿರಿಸಿರುವುದು. ಕಳೆದ ಎರಡು ವರ್ಷಗಳಿಂದ ಅಸ್ತಿತ್ವದಲ್ಲಿರುವ ಈ ಸಂಸ್ಥೆಗಳು ಜನತೆಯ ವಿಶ್ವಾಸವನ್ನು ಗಳಿಸಿವೆ ಮತ್ತು ರಾಷ್ಟ್ರ ಮಾನ್ಯತೆಯನ್ನು ಪಡೆದಿವೆ. ಮಾನ್ಯ ಪ್ರಧಾನಿ ಅವರು ಪಂಚಾಯತ್ ರಾಜ್ಯ ಸಂಸ್ಥೆಗಳ ಉಪಯುಕ್ತತೆಯ ಬಗ್ಗೆ ಒತ್ತು ಕೊಟ್ಟು ಹೇಳುತ್ತಿರುವುದನ್ನು ಗಮನಿಸಿದರೆ, ಈ ಎರಡೂ ಕ್ರಮಗಳು ರಾಷ್ಟ್ರಮಟ್ಟದಲ್ಲಿ ಅಳವಡಿಕೆಯಾಗುತ್ತಿವೆ ಎಂಬುದು ಮಾನ್ಯ ಸದಸ್ಯರೆಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ.

೫೫, ಜನಸೇವೆಗೆ ಉತ್ತಮ ಸಾಧನವಾಗಬಲ್ಲ ಈ ಸಂಸ್ಥೆಗಳ ಬಲವರ್ಧನೆಗೆ ನಾವು ಪೂರ್ಣ ಬದ್ಧರಾಗಿದ್ದೇವೆ. ಈ ಗುರಿಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಸಮುಚಿತ ಶಿಫಾರಸ್ಸುಗಳನ್ನು ಮಾಡಲು ಸರ್ಕಾರವು ಕೃಷ್ಣಸ್ವಾಮಿ ಆಯೋಗವನ್ನು ರಚಿಸಿದೆ, ಜಿಲ್ಲಾ ಪರಿಷತ್ತು ಕುರಿತ ಹಣಕಾಸು ಆಯೋಗವು ತನ್ನ ವರದಿಯನ್ನು ನೀಡಿದ ನಂತರ ನಿಧಿಗಳ ಪ್ರಾಪ್ತಿಯ ಬಗೆಗಿನ ಒಂದು ಶಾಶ್ವತ ವ್ಯವಸ್ಥೆ ಸದ್ಯದಲ್ಲಿ ಜಾರಿಗೆ ಬರಲಿದೆ.

ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಲಿ

೫೬, ನಿಯತ ಯೋಜನಾ ಕಾರ್ಯಕ್ರಮಗಳ ಮೂಲಕ ಪ್ರಾದೇಶಿಕ ಅಸಮಾನತೆಗಳನ್ನು ನಿವಾರಿಸಲು ನಾವು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದ್ದೇವೆ. ಎಷ್ಟೇ ಪ್ರಯತ್ನಿಸಿದರೂ, ಹೈದರಾಬಾದ್-ಕರ್ನಾಟಕ ಪ್ರದೇಶವು ತೌಲನಿಕವಾಗಿ ಹಿಂದುಳಿದಿದೆ. ಈ ಪ್ರಾದೇಶಿಕ ಅಸಮಾನತೆಗಳನ್ನು ನಿವಾರಿಸುವ ಸಲುವಾಗಿ ೧೯೮೯-೯೦ರಲ್ಲಿ ನಾವು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ

ಮಂಡಳಿಯನ್ನು ರಚಿಸಲಿದ್ದೇವೆ. ಈ ಮಂಡಳಿಯು ಆಂಧ್ರ ಪ್ರದೇಶದ ತೆಲಂಗಾಣ ಮಂಡಳಿ ಹಾಗೂ ಪಶ್ಚಿಮ ಬಂಗಾಳದ ಸುಂದರಬನ ಮಂಡಳಿಗಳಂತೆಯೇ ಕಾರ್ಯ ನಿರ್ವಹಿಸುವುದು. ಈ ಉದ್ದೇಶಕ್ಕಾಗಿ ನಾನು ೧೯೮೯-೯೦ ರಲ್ಲಿ ೨ ಕೋಟಿ ರೂಪಾಯಿಗಳನ್ನು ಪ್ರತ್ಯೇಕವಾಗಿ ಒದಗಿಸಿದ್ದೇನೆ. ಈ ವರ್ಷ ಈ ಏರ್ಪಾಟನ್ನು ೪ ಕೋಟಿ ರೂಪಾಯಿಗಳಿಗೆ ಏರಿಸಲಾಗುವುದು.

ಕಲ್ಯಾಣ

೫೭. ಮಾನವ ಸಂಪನ್ಮೂಲಗಳಲ್ಲಿ ಬಂಡವಾಳ ಹೂಡುವ ಬಗ್ಗೆ ನಮಗೆ ನಂಬಿಕೆಯಿದೆ. ಜೀವನ ಮಟ್ಟದ ಸುಧಾರಣೆಯು ವಿವಿಧ ಪ್ರಯೋಜನಗಳನ್ನು ನೀಡುತ್ತದೆ. ಈ ನಮ್ಮ ನಂಬಿಕೆಯೇ ಕಳೆದ ಆರು ವರ್ಷಗಳಿಂದಲೂ ನಮ್ಮ ಆದ್ಯತೆಗಳನ್ನು ನಿರ್ಧರಿಸಿದೆ. ತದನುಸಾರವಾಗಿ ನಾವು ನಮ್ಮ ಜನತೆಯ ಕಲ್ಯಾಣಕ್ಕಾಗಿ ಈ ಗಣನೀಯ ಪ್ರಮಾಣದ ಹಂಚಿಕೆಗಳನ್ನು ಮಾಡಿದ್ದೇವೆ.

೫೮. ತಗ್ಗಿಸಿದ ದರದಲ್ಲಿ ಬಡವರಿಗೆ ಆಹಾರ ಧಾನ್ಯಗಳನ್ನು ನೀಡುವ ಸಲುವಾಗಿ ೧೯೮೯—೯೦ ರಲ್ಲಿ ನಾವು ೩೭.೭೩ ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ವಿಧವಾ ವೇತನ ಯೋಜನೆಯಡಿಯಲ್ಲಿ ೧೯೯೦-೯೧ರಲ್ಲಿ ನಾವು ೨೭ ಕೋಟಿ ರೂಪಾಯಿಗಳನ್ನು, ವೃದ್ಧಾಪ್ಯ ವೇತನಗಳಿಗಾಗಿ ೩೭ ಕೋಟಿ ರೂಪಾಯಿಗಳನ್ನು ಮತ್ತು ಅಂಗವಿಕಲರ ಸಹಾಯಕ್ಕಾಗಿ ೧೪ ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ೨೦,೦೦೦ಕ್ಕಿಂತ ಕಡಿಮೆ ಜನಸಂಖ್ಯೆಯಿರುವ ಸಣ್ಣ ಪಟ್ಟಣಗಳಿಗೆ ಹಸಿರು ಕಾರ್ಡನ್ನು ನೀಡಬೇಕೆಂಬ ಸರ್ಕಾರದ ಇತ್ತೀಚಿನ ನಿರ್ಣಯವನ್ನು ೧೯೯೦-೯೧ರಲ್ಲಿ ಅನುಷ್ಠಾನಗೊಳಿಸಲಾಗುವುದು. ಇದರಿಂದ ೫೫ ಪಟ್ಟಣಗಳಲ್ಲಿ ೭೯,೦೦೦ ಕುಟುಂಬಗಳಿಗೆ ಪ್ರಯೋಜನ ದೊರೆಯಲಿದೆ.

೫೯. ಗ್ರಾಮೀಣ ಕಾರ್ಮಿಕರು ನಮ್ಮ ರಾಷ್ಟ್ರೀಯ ಅರ್ಥ ವ್ಯವಸ್ಥೆಗೆ ಬುನಾದಿಯಾಗಿರುವ ಕಾರಣ, ಕೃಷಿ ಕಾರ್ಮಿಕರ ವಿಶೇಷ ಕಲ್ಯಾಣ ಕ್ರಮವಾಗಿ, ಸಮೂಹ ವಿಮೆ ಹಾಗೂ ನಿವೃತ್ತಿ ವೇತನ ಯೋಜನೆಯೊಂದನ್ನು ಅನುಷ್ಠಾನಕ್ಕೆ ತರಲು ಉದ್ದೇಶಿಸಿದ್ದೇನೆ. ಕೃಷಿ ಕಾರ್ಯದಲ್ಲಿ ಸಕ್ರಿಯನಾಗಿ ತೊಡಗಿರುವಾಗ ಅಸಮರ್ಥನಾದ ವ್ಯಕ್ತಿಗೆ ೬೦ ರೂಪಾಯಿಗಳ ಮಾಸಿಕ ನಿವೃತ್ತಿ ವೇತನವನ್ನು ನೀಡಲಾಗುವುದು. ಕೃಷಿ ಕಾರ್ಮಿಕನ ಮರಣದ ಸಂದರ್ಭದಲ್ಲಿ ಮೃತನ ಕುಟುಂಬಕ್ಕೆ ೨,೫೦೦ ರೂಪಾಯಿಗಳನ್ನು ನೀಡಲಾಗುವುದು. ಗ್ರಾಮೀಣ ಪ್ರದೇಶಗಳಲ್ಲಿರುವ ಬಡ ಕುಟುಂಬಗಳ ಅನುಕೂಲಕ್ಕಾಗಿ ನಾವು ಕುಟೀರ ವಿಮಾ ಯೋಜನೆಯನ್ನು ಕಾರ್ಯ ರೂಪಕ್ಕೆ ತರಲಿದ್ದೇವೆ ಎಂಬುದನ್ನು ಸದನಕ್ಕೆ ತಿಳಿಸಬಯಸುತ್ತೇನೆ. ಅವರ ಗುಡಿಸಲುಗಳು ಹಾಗೂ ಸ್ವತ್ತುಗಳು ಬೆಂಕಿಯಿಂದಾಗಿ ನಾಶವಾದಾಗ, ಈ ಯೋಜನೆಯು ಅವರಿಗೆ ನೆರವು ನೀಡುತ್ತದೆ. ಪ್ರಾಕೃತಿಕ ವಿಕೋಪಗಳ ಸಂದರ್ಭದಲ್ಲಿ ನೀಡಲಾಗುವ ಸಾಮಾನ್ಯ ಪರಿಹಾರಗಳು ಪ್ರತ್ಯೇಕ.

ವಿಶೇಷ ನ್ಯಾಯಾಲಯಗಳು

೬೦. ನಾಗರಿಕ ಹಕ್ಕುಗಳ ಜಾರಿ ವಿಭಾಗವು, ೧೯೭೬ರ ನಾಗರಿಕ ಹಕ್ಕುಗಳ ಸಂರಕ್ಷಣೆಯನ್ನು ಜಾರಿಗೊಳಿಸುವ ಅಧಿನಿಯಮವನ್ನು ಉಲ್ಲಂಘಿಸುವ ವ್ಯಕ್ತಿಗಳ ವಿರುದ್ಧ ಪ್ರಕರಣಗಳನ್ನು ದಾಖಲು ಮಾಡಿಕೊಳ್ಳುತ್ತದೆ. ಅಪರಾಧಿಗಳನ್ನು ಶೀಘ್ರವಾಗಿ ವಿಚಾರಣೆಗೆ ಒಳಪಡಿಸುವ ದೃಷ್ಟಿಯಿಂದ, ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲು ನಾನು ಪ್ರಸ್ತಾವಿಸಿದ್ದೇನೆ. ಈ ನ್ಯಾಯಾಲಯಗಳು ವರದಕ್ಷಿಣೆಗೆ ಸಂಬಂಧಿಸಿದ ಪ್ರಕರಣಗಳ ಬಗ್ಗೆಯೂ ವಿಚಾರಣೆ ನಡೆಸುತ್ತವೆ.

ಮೀಸಲಾತಿಯ ಜಾರಿ

೬೧. ಅನುಸೂಚಿತ ಜಾತಿ/ಅನುಸೂಚಿತ ಪಂಗಡಗಳಿಗೆ/ಹಿಂದುಳಿದ ಕೋಮುಗಳಿಗೆ ಸೇರಿದ ವ್ಯಕ್ತಿಗಳ ಸಂಬಂಧದಲ್ಲಿ ಸರ್ಕಾರಿ ಸೇವೆಯಲ್ಲಿ ಹುದ್ದೆಗಳ ಮೀಸಲಾತಿ ಕಾರ್ಯನೀತಿಯನ್ನು ಸೂಕ್ತವಾಗಿ ಜಾರಿಗೊಳಿಸುತ್ತಿಲ್ಲ ಎಂಬುದರ ಬಗ್ಗೆ ನನಗೆ ದೂರುಗಳು ಬಂದಿವೆ. ಮೀಸಲಾತಿಯನ್ನು ಕಡ್ಡಾಯಗೊಳಿಸಲು ಮತ್ತು ಈ ಕಾನೂನು ಉಪಬಂಧಗಳನ್ನು ಪಾಲಿಸಲು ತಪ್ಪಿದಲ್ಲಿ ದಂಡನೆಗಳನ್ನು ವಿಧಿಸಲು ಶಾಸನಾತ್ಮಕ ಕ್ರಮಗಳನ್ನು ತರಲು ಉದ್ದೇಶಿಸಿದ್ದೇನೆ. ಈ ಕಾರ್ಯನೀತಿಯನ್ನು ಅಕ್ಷರಶಃ ಮತ್ತು ತತ್ವಶಃ ಅನುಷ್ಠಾನಗೊಳಿಸುವ ಸಂಸ್ಥೆಗಳಿಗೆ ವಿಶೇಷ ಪಾರಿತೋಷಕಗಳನ್ನು ನೀಡಲು ನಾನು ಉದ್ದೇಶಿಸಿದ್ದೇನೆ.

೬೨. ೧,೦೦,೦೦೦ ಬಾಲಕ ಬಾಲಕಿಯರು ೧,೯೦೦ ಪರಿಶಿಷ್ಟಜಾತಿ/ಪರಿಶಿಷ್ಟ ವರ್ಗ/ಹಿಂದುಳಿದ ಜನಾಂಗಗಳ ವಿದ್ಯಾರ್ಥಿ ನಿಲಯಗಳಲ್ಲಿದ್ದುಕೊಂಡು ತಮ್ಮ ಶಿಕ್ಷಣವನ್ನು ಮುಂದುವರೆಸುತ್ತಿದ್ದಾರೆ. ಬೆಲೆಗಳಲ್ಲಿ ಹೆಚ್ಚಳ ಉಂಟಾದುದರಿಂದ ಪ್ರಸ್ತುತ ನೀಡುತ್ತಿರುವ ಭೋಜನ ವೆಚ್ಚಗಳು ಸಾಕಾಗುವುದಿಲ್ಲವೆಂದು ಭಾವಿಸಲಾಗಿದೆ. ಆದ್ದರಿಂದ, ಈ ಭೋಜನ ವೆಚ್ಚಗಳನ್ನು ಆಶ್ರಮ ಮತ್ತು ನಿವಾಸಿ ಶಾಲೆಗಳಲ್ಲಿನ ವಿದ್ಯಾರ್ಥಿಗಳಿಗೆ ೭೫ ರೂಪಾಯಿಯಿಂದ ೧೦೦ ರೂಪಾಯಿಗೂ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ೧೦೦ ರೂಪಾಯಿಯಿಂದ ೧೫೦ ರೂಪಾಯಿಗೂ, ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ೧೫೦ ರೂಪಾಯಿನಿಂದ ೨೦೦ ರೂಪಾಯಿಗೆ ಹೆಚ್ಚಿಸಲು ನಾನು ಪ್ರಸ್ತಾವಿಸಿದ್ದೇನೆ.

ಮಹಿಳೆಯರಿಗೆ ಉದ್ಯೋಗ

೬೩. ಸಮಕಾಲೀನ ಸಮಾಜದಲ್ಲಿ ಮಹಿಳೆಯ ಸ್ಥಾನಮಾನದಲ್ಲಿ ಮಹತ್ತರ ಪರಿವರ್ತನೆಯಾಗುತ್ತಿದೆ. ಎಲ್ಲೆಡೆ ವಿದ್ಯಾಭ್ಯಾಸ ಹೆಚ್ಚುತ್ತಿರುವುದರೊಂದಿಗೆ, ಅವರ ಹಕ್ಕು ಬಾಧ್ಯತೆಗಳು ಮತ್ತು ಅವರಿಗೆ ದೊರೆಯಬೇಕಾದ ಸೂಕ್ತ ಪ್ರಾತಿನಿಧ್ಯದಿಂದ ಅವರು ವಂಚಿತರಾಗುತ್ತಿರುವ ಬಗ್ಗೆ ಅವರಲ್ಲಿ ಹೆಚ್ಚಿನ ಜಾಗೃತಿ ಮೂಡುತ್ತಿದೆ. ಇನ್ನು ಮುಂದೆ ಸರ್ಕಾರಿ ಸೇವೆಯ ನಿರ್ದಿಷ್ಟ ವರ್ಗಗಳಲ್ಲಿ ಶೇಕಡ ೩೦ರಷ್ಟು ಹುದ್ದೆಗಳನ್ನು ಮಹಿಳೆಯರಿಗಾಗಿಯೇ ಮೀಸಲಿಡುವ ಮೂಲಕ ಈ ಪರಿಸ್ಥಿತಿಯನ್ನು ಸರಿಪಡಿಸಲು ನಾವು ಪ್ರಸ್ತಾವಿಸಿದ್ದೇವೆ. ಪೋಲೀಸು ದಳದಲ್ಲಿ ಮಹಿಳೆಯರ ಸಂಖ್ಯೆ ಅತ್ಯಂತ ಕಡಿಮೆಯಿದೆ. ಪೋಲೀಸು ದಳದಲ್ಲಿ ಶೇಕಡ ೧೦ರಷ್ಟು ಹುದ್ದೆಗಳನ್ನು ಮಹಿಳೆಯರಿಗಾಗಿ ಮೀಸಲಿಡಲು ನಾನು ಪ್ರಸ್ತಾವಿಸಿದ್ದೇನೆ. ಉದ್ಯೋಗ ನಿರತ ಮಹಿಳೆಯರ ಸಮಸ್ಯೆಗಳನ್ನು ಗುರುತಿಸಲು ಮತ್ತು ಅವುಗಳ ನಿವಾರಣೆಗೆ ಪರಿಹಾರ ಕ್ರಮಗಳನ್ನು ಸೂಚಿಸಲು ಸ್ವಯಂ ಉದ್ಯೋಗ ನಿರತ ಮಹಿಳೆಯರಿಗಾಗಿ ೧೯೮೯–೯೦ರಲ್ಲಿ ರಾಜ್ಯ ಮಟ್ಟದ ಆಯೋಗವೊಂದನ್ನು ನಾವು ರಚಿಸಲಿದ್ದೇವೆ.

ಕನ್ನಡಿಗರ ಉದ್ಯೋಗ ಸಮಿತಿ :

೬೪. ಕೇಂದ್ರ ಸರ್ಕಾರದ ಉದ್ಯಮಗಳು, ರಾಷ್ಟ್ರೀಕೃತ ಬ್ಯಾಂಕು ಮುಂತಾದವುಗಳಲ್ಲಿ ಕನ್ನಡಿಗರಿಗೆ ದೊರೆಯಬೇಕಾದ ಉದ್ಯೋಗದ ನ್ಯಾಯ ಸಮ್ಮತ ಪಾಲನ್ನು ರಕ್ಷಿಸಿಕೊಳ್ಳಬೇಕಾಗಿದೆ. ಹಿಂದಿನ ವರ್ಷ ರಚಿತವಾದ ಕನ್ನಡಿಗರ ಉದ್ಯೋಗ ಸಮಿತಿಯು ಎರಡು ಮಧ್ಯಕಾಲೀನ ವರದಿಗಳನ್ನು ಸಲ್ಲಿಸಿದೆ. ಈ ಸಂಸ್ಥೆಗಳಲ್ಲಿ ರಾಜ್ಯದ ಜನತೆಗೆ ದೊರೆಯಬೇಕಾದ ಉದ್ಯೋಗದ ನ್ಯಾಯಸಮ್ಮತ ಪಾಲನ್ನು ಕಾಪಾಡಿಕೊಂಡು ಬರಲಾಗುವುದೆಂಬ ಭರವಸೆಯನ್ನು ಅವರಿಗೆ ನಾನು ನೀಡುತ್ತೇನೆ.

ಆಡಳಿತದಲ್ಲಿ ಕನ್ನಡದ ಬಳಕೆ :

೬೫. ಜನತೆ ಹಾಗೂ ಆಡಳಿತದ ನಡುವೆ ನಿಕಟ ಸಂಪರ್ಕ ಕಲ್ಪಿಸುವ ಕಾರ್ಯ ನೀತಿಗನುಗುಣವಾಗಿ, ಆಡಳಿತದಲ್ಲಿ ಕನ್ನಡವನ್ನು ವ್ಯಾಪಕವಾಗಿ ಅನುಷ್ಠಾನಕ್ಕೆ ತಂದಿದ್ದೇವೆ. ರಾಜ್ಯ ಸರ್ಕಾರದ ಕಛೇರಿಗಳಲ್ಲಿ ಆಗಿರುವ ಈ ಪ್ರಗತಿಯನ್ನು ಕನ್ನಡ ಕಾವಲು ಸಮಿತಿಯು ಗಮನಿಸಿದೆ. ವಿವಿಧ ಕಛೇರಿಗಳನ್ನು ಸಂದರ್ಶಿಸಿ ಸವಿವರ ಅಧ್ಯಯನ ನಡೆಸಿ ಸಮಿತಿಯು ರಾಜ್ಯ ಸರ್ಕಾರಕ್ಕೆ ಈ ಬಗ್ಗೆ ಅನೇಕ ಸಲಹೆಗಳನ್ನು ನೀಡಿದೆ. ಸಮಿತಿಯ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರಲು ನಾವು ಬದ್ಧರಾಗಿದ್ದೇವೆ.

೬೬. ಉರ್ದು ಭಾಷೆಗಾಗಿ ಒಂದು ಪ್ರತ್ಯೇಕ ನಿರ್ದೇಶನಾಲಯವನ್ನು ಪ್ರಾರಂಭಿಸಬೇಕೆಂದು ಉದ್ದೇಶಿಸಿದ್ದೆವು, ಇದೇ ವೇಳೆಯಲ್ಲಿ ಅಲ್ಪಸಂಖ್ಯಾತ ಭಾಷೆಗಳ ನಿರ್ದೇಶನಾಲಯವನ್ನು ಅಸ್ತಿತ್ವಕ್ಕೆ ತರಲಾಯಿತು. ಆದರೆ ಈ ಪುರಾತನ ಮತ್ತು ಶ್ರೀಮಂತ ಭಾಷೆಗೆ ಇನ್ನೂ ಹೆಚ್ಚಿನ ಪ್ರೋತ್ಸಾಹದ ಅಗತ್ಯವಿದೆ. ಆದ್ದರಿಂದ, ೧೯೮೯–೯೦ರಲ್ಲಿ ಉರ್ದು ಭಾಷೆಗಾಗಿ ಒಂದು ಪ್ರತ್ಯೇಕ ನಿರ್ದೇಶನಾಲಯವನ್ನು ಸ್ಥಾಪಿಸುವ ನಮ್ಮ ಉದ್ದೇಶವನ್ನು ನಾನು ಪುನಃ ಹೇಳಬಯಸುತ್ತೇನೆ.

೬೭. ಕೃಷ್ಣಾ ಮೇಲ್ದಂಡೆ ಯೋಜನೆಯ ಬಸವಸಾಗರ ಜಲಾಶಯದಿಂದ ಕೂಡಲ ಸಂಗಮದ ಶ್ರೀ ಸಂಗಮೇಶ್ವರ ದೇವಾಲಯಕ್ಕೆ ಧಕ್ಕೆಯಾಗುತ್ತದೆ. ಕೂಡಲ ಸಂಗಮ ಕ್ಷೇತ್ರವನ್ನು ಕುರಿತ ಮುದ್ನಾಳ್ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದೆ ಮತ್ತು ಈ ಐತಿಹಾಸಿಕ ದೇವಾಲಯದ ರಕ್ಷಣೆಗಾಗಿ ಹಲವಾರು ಶಿಫಾರಸುಗಳನ್ನು ಮಾಡಿದೆ. ನಾವು ಈ ಶಿಫಾರಸುಗಳನ್ನು ಅಂಗೀಕರಿಸಿದ್ದೇವೆ. ಮುಂದಿನ ವರ್ಷದಿಂದ ಈ ಶಿಫಾರಸುಗಳನ್ನು ಕಾರ್ಯಗತಗೊಳಿಸಲು ಪ್ರಾರಂಭಿಸುತ್ತೇವೆ.

೬೮. ೧೯೭೯–೮೦ನೇ ಬಜೆಟಿಗೆ ಸಂಬಂಧಿಸಿದಂತೆ ನನ್ನ ಮೂಲಭೂತ ದೃಷ್ಟಿ ಕೋನವೇನೆಂಬುದನ್ನು ಸ್ಪಷ್ಟಪಡಿಸುತ್ತೇನೆ. ಕೃಷಿ ಮತ್ತು ಉದ್ಯಮಗಳ ಸಮಾನ ಅಭಿವೃದ್ಧಿಯ ಮೂಲಕ ಅಧಿಕ ಉದ್ಯೋಗಾವಕಾಶಕ್ಕೆ ಹಾಗೂ ದಾರಿದ್ರ್ಯ ನಿರ್ಮೂಲನಕ್ಕೆ ಪ್ರಾಶಸ್ತ್ಯ ನೀಡಿ ಗ್ರಾಮೀಣ ಅಭಿವೃದ್ಧಿಯನ್ನು ಇನ್ನಷ್ಟು ತ್ವರೆಗೊಳಿಸುವ ಗುರಿಯನ್ನು ಈ ಬಜೆಟ್ ಹೊಂದಿದೆ. ನೀರಾವರಿ ಹಾಗೂ ವಿದ್ಯುತ್ತು ರಾಜ್ಯದ ಅರ್ಥವ್ಯವಸ್ಥೆಯ ಹೆಚ್ಚಿನ ಬೆಳವಣಿಗೆಗೆ ಅಗತ್ಯವಿರುವಂಥ ತ್ವರಿತಗತಿಯನ್ನು ನೀಡುತ್ತವೆ. ಈ ಅರ್ಥವ್ಯವಸ್ಥೆಯ ಬೆಳವಣಿಗೆಯ ಜೊತೆಯಲ್ಲೇ ಹೆಚ್ಚು ಉದ್ಯೋಗ ನೀಡಿ ಮತ್ತು ಅಪಾರ ಜನತೆಯ ಕಲ್ಯಾಣದ ಪ್ರಧಾನ ಗುರಿಯು ಸೇರಿಕೊಂಡಲ್ಲಿ ಪ್ರಾದೇಶಿಕ ಅಸಮತೆಗಳು ಕಡಿಮೆಯಾಗುತ್ತವೆ. ಅಧಿಕ ಉತ್ಪಾದಕತೆ, ಯೋಜನಾ ಕಾರ್ಯಕ್ರಮಗಳ ಯಶಸ್ವೀ ಕಾರ್ಯಾನುಸರಣೆ ಹಾಗೂ ಅನುಷ್ಠಾನ ವಿಧಾನಗಳಿಗೆ ಸಂಬಂಧಿಸಿದಂತೆ ತೀವ್ರ ಗತಿ ನಿರ್ದೇಶನ ಇವೇ ಈ ದಿಸೆಯಲ್ಲಿ ನಮ್ಮ ತಾರಕಮಂತ್ರವಾಗಬೇಕು. ಈ ಹೊಸ ಪ್ರಯತ್ನದ ಪ್ರಮುಖ ಅಂಶಗಳು ಈ ಮುಂದಿನಂತಿವೆ–ದುಡಿಮೆ ಆಧಾರಿತ ಶಿಕ್ಷಣದ ಹೊಸ ತತ್ವಕ್ಕನುಗುಣವಾಗಿ, ಭೂಸೇನಾ ಕಾರ್ಯಕ್ರಮದೊಂದಿಗೆ ಟ್ರೈಸಂನ ಸಂಯೋಜನ, ನೀರಾವರಿಗಾಗಿ ೩೦೯ ಕೋಟಿ ರೂಪಾಯಿಗೆ ಮೇಲ್ಪಟ್ಟು ಏರ್ಪಾಟು, ವಿದ್ಯುತ್ತು ವಲಯಕ್ಕೂ ಸಮಾನ ಪ್ರಾಧಾನ್ಯ, ಭೂ ಬಳಕೆಯ ಕುರಿತ ಹೊಸ ಕಾರ್ಯನೀತಿ, ಗೃಹ ನಿರ್ಮಾಣ ಕಾರ್ಯಕ್ರಮದ ವಿಸ್ತರಣೆ, ಗ್ರಾಮೀಣ ನೈರ್ಮಲ್ಯ ಯೋಜನೆಗಳ ವ್ಯವಸ್ಥೆ, ನಿರ್ದಿಷ್ಟ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಉದ್ಯೋಗ ಮೀಸಲಾತಿ, ದುರ್ಬಲ ವರ್ಗದ ಜನರಿಗೆ ಸಂಬಂಧಿಸಿದಂತೆ ಮೀಸಲಾತಿ ಕಾರ್ಯನೀತಿಯನ್ನು ಕಾರ್ಯಗತಗೊಳಿಸುವಲ್ಲಿ ಶಾಸನಾತ್ಮಕ ಬೆಂಬಲ, ಕೃಷಿ ಕಾರ್ಮಿಕರಿಗಾಗಿ ಸಮೂಹ ವಿಮೆ ಹಾಗೂ ನಿವೃತ್ತಿವೇತನ ಕಾರ್ಯಕ್ರಮಗಳ ಅನುಷ್ಠಾನ, ಅಧಿಕ ದಕ್ಷತೆಯನ್ನು ಸಾಧಿಸುವ ಸಲುವಾಗಿ ರಾಜ್ಯದ ಸರ್ಕಾರಿ ಉದ್ಯಮಗಳ ಪುನರ್ರಚನೆ, ಪ್ರಾಥಮಿಕ ಶಿಕ್ಷಣದ ವಿಸ್ತರಣೆ ಹಾಗೂ ಅಲ್ಪಸಂಖ್ಯಾತರಿಗೆ ಆರೋಗ್ಯ ಸೌಲಭ್ಯಗಳು ಮತ್ತು ಉತ್ತೇಜನ.

ತೆರಿಗೆ ವಿಧಿಸುವುದು

೬೯. ತೆರಿಗೆ ವಿಧಿಸುವ ವಿಷಯಕ್ಕೆ ನಾನು ಈಗ ಬರುತ್ತೇನೆ.

೧೯೭೯–೮೦ರ ತೆರಿಗೆ ವಿಧಿಸುವ ನನ್ನ ಕಾರ್ಯನೀತಿಯ ಪ್ರಮುಖ ಉದ್ದೇಶಗಳು ಈ ಮುಂದಿನಂತಿವೆ :—

(೧) ೭ನೇ ಯೋಜನೆಯ ಮೊದಲ ನಾಲ್ಕು ವರ್ಷಗಳಲ್ಲಿ ಈಗಾಗಲೇ ಹೆಚ್ಚುವರಿ ಸಂಪನ್ಮೂಲ ಸಂಗ್ರಹಣೆಯ ಮೂಲಕ ಗಣನೀಯ ಸಂಪನ್ಮೂಲಗಳನ್ನು ಕ್ರೋಢೀಕರಿಸಿದ್ದೇವೆ. ಯೋಜನೆಯ ಕೊನೆಯ ವರ್ಷದಲ್ಲಿ, ಹೊಸ ತೆರಿಗೆಗಳನ್ನು ವಿಧಿಸುವುದಕ್ಕಿಂತ ಹೆಚ್ಚಾಗಿ ಕಾರ್ಯ ವಿಧಾನಗಳನ್ನು ಕ್ರಮಗೊಳಿಸುವ ಮೂಲಕ ಹೆಚ್ಚುವರಿ ಸಂಪನ್ಮೂಲಗಳನ್ನು ಸಂಗ್ರಹಿಸುವ ಮತ್ತು ತೆರಿಗೆಯನ್ನು ಉತ್ತಮವಾಗಿ ವಸೂಲಿ ಮಾಡುವ ಕಡೆಗೆ ನಮ್ಮ ಗಮನವಿದೆ.

(೨) ತೆರಿಗೆ ಕಾನೂನುಗಳನ್ನು ಸರಳಗೊಳಿಸುವ ಮತ್ತು ನ್ಯೂನತೆಗಳನ್ನು ಸರಿಪಡಿಸುವ ಮೂಲಕ ಹೆಚ್ಚು ರಾಜಸ್ವಗಳನ್ನು ಸಂಗ್ರಹಿಸುತ್ತೇವೆ.

(೩) ವ್ಯಾಪಾರದ ವಿಮುಖತೆಯನ್ನು ನಿವಾರಿಸಲು, ಆರೋಗ್ಯಕರ ವ್ಯಾಪಾರ ಪದ್ಧತಿಗಳನ್ನು ವೃದ್ಧಿಗೊಳಿಸಲು ಮತ್ತು ಅರ್ಹ ಪ್ರಕರಣಗಳಲ್ಲಿ ಪರಿಹಾರವನ್ನು ಒದಗಿಸಲು ಕೆಲವು ಬಾಬುಗಳ ಸಂಬಂಧದಲ್ಲಿ ತೆರಿಗೆ ದರಗಳನ್ನು ನಾವು ಮಾರ್ಪಡಿಸುತ್ತೇವೆ.

(೪) ಇದು ರಾಜ್ಯ ತೆರಿಗೆ ನೀತಿಯಿಂದಾಗಿ ಬೆಲೆ ಏರುವುದನ್ನು ನಿವಾರಿಸಲು ಕೈಕೊಂಡ ಕ್ರಮವಾಗಿದೆ.

ಮೋಟಾರು ವಾಹನ ತೆರಿಗೆ

೭೦. ೧೯೫೭ರ ಕರ್ನಾಟಕ ಮೋಟಾರು ವಾಹನ ತೆರಿಗೆ ಅಧಿನಿಯಮವನ್ನು ಈ ಮುಂದಿನ ಪರಿಣಾಮಗಳನ್ನು ಉಂಟುಮಾಡುವಂತೆ ತಿದ್ದುಪಡಿ ಮಾಡಲು ನಾನು ಉದ್ದೇಶಿಸಿದ್ದೇನೆ.

(ಎ) ಒಂದು ಉದ್ದೇಶಕ್ಕಾಗಿ ನೋಂದಾಯಿಸಲಾದ ವಾಹನಗಳನ್ನು, ತೆರಿಗೆ ಸಂದಾಯ ಮಾಡದೆಯೇ ಹೆಚ್ಚಿಗೆ ಪ್ರಯಾಣಿಕರನ್ನು ಕೊಂಡೊಯ್ಯಲು ಬೇರೊಂದು ಉದ್ದೇಶಕ್ಕಾಗಿ ದುರುಪಯೋಗ ಪಡಿಸುವ ಮೂಲಕ ಆದಾಯವು ಸೋರಿ ಹೋಗದಂತೆ ಕಾನೂನಿನ ನ್ಯೂನತೆಗಳನ್ನು ಸರಿಪಡಿಸುವುದು.

(ಬಿ) ದ್ವಿಚಕ್ರವಾಹನಗಳನ್ನು, ಇತರ ರಾಜ್ಯಗಳ ಸರಕು ವಾಹನಗಳು, ಖಾಸಗಿ ಸೇವಾ ವಾಹನಗಳು, ಬ್ಯಾಂಕುಗಳು, ಮಂಡಳಿಗಳು, ನಿಗಮಗಳು, ಸಹಕಾರಿ ಸಂಘಗಳು ಮತ್ತು ಇಂಥವೇ ಸಂಸ್ಥೆಗಳ ಒಡೆತನದ ಕಾರುಗಳು, ವ್ಯಕ್ತಿಗಳ ಸ್ವಂತ ಒಡೆತನದ್ದಲ್ಲದ ವಾಹನಗಳು, ಬಹು ಅಚ್ಚು ಸರಕು ವಾಹನಗಳು, ಕೈಯಿಂದ ನಡೆಸುವ ಉಳಿಮೆ ಯಂತ್ರಗಳು, ಬೇಸಾಯಗಾರರ ಒಡೆತನದ ಟ್ರಾಕ್ಟರುಗಳು ಮತ್ತು ಕೃಷಿ ಉದ್ದೇಶಗಳಿಗಾಗಿ ಮಾತ್ರವೇ ಬಳಸುವ ಟ್ರಾಕ್ಟರುಗಳು ಇವುಗಳ ಮೇಲಿನ ತೆರಿಗೆ ದರಗಳನ್ನು ಕ್ರಮಗೊಳಿಸುವುದು.

(ಸಿ) ಭಾರತ ಸರ್ಕಾರವು ಸ್ವಲ್ಪ ದಿನಗಳಲ್ಲೇ ಜಾರಿಗೆ ತರಲಿರುವ ೧೯೮೮ರ ಮೋಟಾರು ವಾಹನ ಅಧಿನಿಯಮಕ್ಕೆ (ಕೇಂದ್ರಾಧಿನಿಯಮ ಸಂಖ್ಯೆ ೫೯/೧೯೮೮) ಸರಿಹೊಂದುವಂತೆ ಮಾಡುವುದಕ್ಕಾಗಿ ಕೆಲವೊಂದು ವಾಹನಗಳಿಗೆ ಸ್ವಲ್ಪ ಮಟ್ಟಿಗೆ ತೆರಿಗೆ ಏರಿಸಲಾಗುವುದು ಮತ್ತು ಇತರ ವಾಹನಗಳ ಮೇಲಿನ ತೆರಿಗೆ ದರವನ್ನು ಇಳಿಸಲಾಗುವುದು. ಇದರಿಂದಾಗಿ ಬರುವ ಹೆಚ್ಚುವರಿ ಆದಾಯವು ವರ್ಷಕ್ಕೆ ೧೬೦ ಲಕ್ಷ ರೂಪಾಯಿ. ವಿವರಗಳನ್ನು ಅನುಬಂಧ–IVರಲ್ಲಿ ಕೊಡಲಾಗಿದೆ.

II ರಾಜ್ಯ ಅಬ್ಕಾರಿ

೭೧. ನಾನು ಈ ಮುಂದಿನವುಗಳನ್ನು ಪ್ರಸ್ತಾವಿಸುತ್ತೇನೆ.

(೧) ೧೯೮೭ರ ಜುಲೈ ೧ ರಿಂದ ತೆಗೆದುಹಾಕಲಾಗಿದ್ದ ಸಾರಾಯಿ ಮೇಲಿನ ಗರಿಷ್ಠ ಮಾರಾಟ ಬೆಲೆಯನ್ನು ೧೯೮೯ರ ಜುಲೈ ೧ನೇ ತಾರೀಖಿನಿಂದ ಮತ್ತೆ ಜಾರಿಗೆ ತರಲು ಪ್ರಸ್ತಾವಿಸಿದ್ದೇನೆ. ಸಾರಾಯಿ ಸರಬರಾಜಿನ ಮೇಲೆ ಹೆಚ್ಚಿನ ನಿಯಂತ್ರಣಕ್ಕಾಗಿ ಇದನ್ನು ಮಾಡಿದೆ.

(೨) ರಾಜ್ಯದೊಳಗೆ ತಯಾರಾದ ಮದ್ಯಗಳ ಮಾರಾಟವನ್ನು ಪ್ರವರ್ಧಿಸಲು ೧೯೮೯ರ ಜುಲೈ ೧ನೇ ದಿನಾಂಕದಿಂದ ಆಮದು ಮಾಡಿಕೊಂಡ ಎಲ್ಲಾ ಬೀರ್ ಮೇಲೆ ಲೀಟರ್ ಒಂದಕ್ಕೆ ೦.೫೦ ಪೈಸೆಯಂತೆ ಮತ್ತು ಐಎಂಎಲ್‌ಗಳ ಮೇಲೆ ಲೀಟರ್ ಒಂದಕ್ಕೆ ೨.೦೦ ರೂಪಾಯಿಗಳಂತೆ ಆಮದು ಶುಲ್ಕವನ್ನು ವಿಧಿಸಲಾಗುವುದು.

ಹೆಚ್ಚುವರಿ ಆದಾಯವು ವರ್ಷವೊಂದಕ್ಕೆ ೯೦ ಲಕ್ಷ ರೂಪಾಯಿಗಳಾಗುವ ಸಂಭವವಿದೆ.

(೩) ಮದ್ಯಸಾರದ ದುರುಪಯೋಗವನ್ನು ತಡೆಯುವ ಸಲುವಾಗಿ, ಮದ್ಯಸಾರ ಆಧಾರಿತ ರಾಸಾಯನಿಕ ಉದ್ಯಮಗಳಿಗೆ ಗುಣಾಪಹೃತ ಮದ್ಯಸಾರವನ್ನು ಮಾತ್ರ ಬಳಸಲು ಅವಕಾಶ ನೀಡಲಾಗಿತ್ತು. ಇನ್ನು ಮುಂದೆ ಅದರ ಸಂಸ್ಕರಣೆಗಳಿಗೆ ಅನುಗುಣವಾಗಿ ರೆಕ್ಟಿಫೈಡ್ ಸ್ಪಿರಿಟ್ ಪಡೆದುಕೊಳ್ಳಲು ಅವರಿಗೆ ಅವಕಾಶ ನೀಡಲಾಗುವುದು. ಇದರಿಂದ ಪ್ರಾಮಾಣಿಕ ಉದ್ಯಮಗಳಿಗೆ ಅವಕ್ಕೆ ಅವಶ್ಯವಿರುವಲ್ಲಿ ರೆಕ್ಟಿಫೈಡ್ ಸ್ಪಿರಿಟ್ ಪಡೆದುಕೊಳ್ಳುವುದು ಸಾಧ್ಯವಾಗುತ್ತದೆ. ಇದೇ ಸಮಯದಲ್ಲಿ, ಅಂಥ ಘಟಕಗಳು ರೆಕ್ಟಿಫೈಡ್ ಸ್ಪಿರಿಟ್ ಅನ್ನು ದುರುಪಯೋಗ ಪಡಿಸಿಕೊಳ್ಳದಂತೆ ಮಾಡಲು ಹಣಕಾಸು ಮತ್ತು ಭೌತಿಕ ಸ್ವರೂಪದ ಹೆಚ್ಚುವರಿ ಭದ್ರತಾ ಕ್ರಮಗಳನ್ನು ಅಬ್ಕಾರಿ ನಿಯಮಗಳಲ್ಲಿ ಮತ್ತು ಲೈಸೆನ್ಸು ಷರತ್ತುಗಳಲ್ಲಿ ಸೇರಿಸಲಾಗುವುದು. ಇದೇ ಬಗೆಯ ಭದ್ರತಾ ಕ್ರಮಗಳನ್ನು ಗುಣಾಪಹೃತ ಮದ್ಯಸಾರವನ್ನು ಬಳಸುತ್ತಿರುವ ರಾಸಾಯನಿಕ ಘಟಕಗಳ ಮೇಲೆ ವಿಧಿಸಲಾಗುವುದು.

(೪) ಪೂಜಾ ಸ್ಥಳಗಳು, ಶೈಕ್ಷಣಿಕ ಸಂಸ್ಥೆಗಳು ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳವರು ವಾಸಿಸುತ್ತಿರುವ ಪ್ರದೇಶಗಳಲ್ಲಿ ಮತ್ತು ಅವುಗಳ ಆಜೂ ಬಾಜಿನಲ್ಲಿ ಮದ್ಯದ ಅಂಗಡಿಗಳನ್ನು ತೆರೆಯುವುದಕ್ಕೆ ಆಸ್ಪದ ನೀಡಲಾಗುವುದಿಲ್ಲ. ಈ ಉದ್ದೇಶದಿಂದ, ಮದ್ಯದಂಗಡಿಗಳಿಗೆ ಲೈಸೆನ್ಸು ನೀಡುವುದನ್ನು ಕುರಿತಂತೆ ಮಾರ್ಗದರ್ಶಕವಾಗಿ ವ್ಯಾಪಕ ನಿಯಮಗಳನ್ನು ರಚಿಸಲಾಗುವುದು. ಮದ್ಯದಂಗಡಿಗಳು ಮತ್ತು ಬಾರುಗಳನ್ನು ನಡೆಸಲು ಇನ್ನು ಮುಂದೆ ನೀಡುವ ಎಲ್ಲ ಲೈಸೆನ್ಸುಗಳನ್ನು ಈ ನಿಯಮಗಳನುಸಾರವಾಗಿ ಕಟ್ಟುನಿಟ್ಟಾಗಿ ನಿಯಂತ್ರಿಸಲಾಗುವುದು.

೫) ೧೯೮೯–೯೦ನೇ ಸಾಲಿನಿಂದ ಹೆಂಡ ಮಾರಾಟದ ಮೇಲಿನ ಪ್ರತಿಬಂಧಗಳನ್ನು ಇಡೀ ಉತ್ತರ ಕನ್ನಡ ಮತ್ತು ಬೆಳಗಾಂ ಜಿಲ್ಲೆಗಳಿಗೆ ವಿಸ್ತರಿಸಲು ಉದ್ದೇಶಿಸಲಾಗಿದೆ. ಇದರಿಂದ ವರ್ಷಕ್ಕೆ ೭೭ ಲಕ್ಷ ರೂಪಾಯಿ ನಷ್ಟ ಉಂಟಾಗುತ್ತದೆ.

(೬) ಹೆಂಡ ಮಾರಾಟ ರದ್ದಿಯಾತಿಯ ನೀತಿಗೆ ಅನುಸಿದ್ಧಾಂತವಾಗಿ ರಾಜ್ಯದಲ್ಲಿ ಕಡಿಮೆ ಮದ್ಯಸಾರವುಳ್ಳ ಬೀರ್‌ನ ಮಾರಾಟಕ್ಕೆ ಉತ್ತೇಜನ ಕಲ್ಪಿಸಲು ಉದ್ದೇಶಿಸಲಾಗಿದೆ. ಕಡಿಮೆ ಮದ್ಯಸಾರ, ಬೀರ್‌ಗಳ ಉತ್ಪಾದನೆ ಮತ್ತು ಮಾರಾಟವನ್ನು ಉತ್ತೇಜಿಸಲು ಶೇಕಡಾ ೫ಕ್ಕಿಂತ ಹೆಚ್ಚು ಮದ್ಯಸಾರದ ಪ್ರಮಾಣವಿರುವ ಎಲ್ಲ ಬೀರ್‌ಗಳ ಮೇಲೆ ಲೀಟರ್‌ವೊಂದಕ್ಕೆ ೩ ರೂಪಾಯಿಗಳ ಹೆಚ್ಚಿನ

ಶುಲ್ಕವನ್ನು ವಿಧಿಸಲು. ಆದರೆ, ಶೇಕಡಾ ೫ ಮತ್ತು ಅದಕ್ಕೂ ಕಡಿಮೆ ಪ್ರಮಾಣದ ಮದ್ಯಸಾರವುಳ್ಳ ಬೀರ್‌ಗಳ ಮೇಲೆ ಲೀಟರ್ ಒಂದಕ್ಕೆ ೧.೭೫ ರೂಪಾಯಿಗಳ ಈಗಿರುವಂಥ ದರದ ಶುಲ್ಕವನ್ನು ಹಾಗೆಯೇ ಉಳಿಸಿಕೊಂಡು ಬರಲು ಪ್ರಸ್ತಾವಿಸಿದ್ದೇನೆ. ಇದರಿಂದಾಗಿ ೪೦ ಲಕ್ಷ ರೂಪಾಯಿಗಳ ಹೆಚ್ಚಿನ ಆದಾಯವು ಬರುತ್ತದೆ.

III ವಾಣಿಜ್ಯ ತೆರಿಗೆಗಳು

೭೨. ವಿವಿಧ ತೆರಿಗೆ ಶಾಸನಗಳನ್ನು ಕ್ರಮಗೊಳಿಸುವ ಮೂಲಕ ಕಾರ್ಯ ವಿಧಾನಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಲು ಮತ್ತು ಆಡಳಿತವನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಪ್ರಸ್ತಾವಿಸಿದ್ದೇನೆ. ಈ ಅಧಿವೇಶನದಲ್ಲಿ ಮಂಡಿಸಲಿರುವ ತಿದ್ದುಪಡಿ ವಿಧೇಯಕಗಳಲ್ಲಿ ಅವುಗಳು ಕಂಡು ಬರುತ್ತವೆ. ಪ್ರಮುಖ ಬದಲಾವಣೆಗಳು ಈ ರೀತಿ ಇವೆ :–

ಎ) ಮಾರಾಟ ತೆರಿಗೆ

(೧) ಯಾವ ಹಂತದಲ್ಲಿ ತೆರಿಗೆ ವಿಧಿಸಬೇಕೆಂಬುದನ್ನು ಮತ್ತು ಮಾರಾಟ ತೆರಿಗೆ ದರಗಳನ್ನು ಸಮಗ್ರವಾಗಿ ಪುನರವಲೋಕನ ಮಾಡಿ ಈ ಮುಂದಿನಂತೆ ಮಾಡಬೇಕೆಂದು ಪ್ರಸ್ತಾವಿಸಲಾಗಿದೆ.

i) ಅನುಬಂಧ–V ರಲ್ಲಿ ಪಟ್ಟಿ ಮಾಡಲಾದ ಸಾಮಗ್ರಿಗಳಿಗೆ ಮಾರಾಟ ತೆರಿಗೆ ವಿನಾಯಿತಿ ನೀಡುವುದು.

ii) ಅನುಬಂಧ–VIರಲ್ಲಿ ಸೂಚಿಸಲಾದ ಕೆಲವಾರು ಸಾಮಗ್ರಿಗಳ ಮೇಲೆ ಮಾರಾಟ ತೆರಿಗೆ ದರಗಳನ್ನು ಕಡಿಮೆ ಮಾಡುವುದು.

ನನ್ನ ಭಾಷಣದಲ್ಲಿ ಈ ಹಿಂದೆ ಗೃಹ ನಿರ್ಮಾಣವನ್ನು ಹೆಚ್ಚಿಸುವ ಅಗತ್ಯತೆಯನ್ನು ಒತ್ತಿ ಹೇಳಿದ್ದೇನೆ. ಪ್ರಸಕ್ತ, ಸಿಮೆಂಟಿನ ಮೇಲೆ ಮಾರಾಟ ತೆರಿಗೆ ಶೇಕಡ ೧೮. ಸಿಮೆಂಟು ಗ್ರಾಹಕರಿಗೆ ಸಮಂಜಸ ಬೆಲೆಯಲ್ಲಿ ದೊರೆಯುವಂತೆ ಮಾಡಲು ನಾನು ಮಾರಾಟ ತೆರಿಗೆಯನ್ನು ಶೇಕಡಾ ೧೫ಕ್ಕೆ ಇಳಿಸಲು ಪ್ರಸ್ತಾವಿಸುತ್ತೇನೆ.

iii) ಕೆಲವು ಸರಕುಗಳ ಸಂಬಂಧದಲ್ಲಿ ಅನುಬಂಧ–VIIರಲ್ಲಿ ಸೂಚಿಸಿರುವಂತೆ ತೆರಿಗೆ ವಿಧಿಸುವ ಹಂತವನ್ನು ಬಹು ಹಂತದಿಂದ ಏಕಹಂತಕ್ಕೆ ಬದಲಾಯಿಸುವುದು.

iv) ಅನುಬಂಧ–VIII ರಲ್ಲಿ ಸೂಚಿಸಿರುವಂತೆ ಕೆಲವು ಸರಕುಗಳ ಮೇಲೆ ತೆರಿಗೆ ವಿಧಿಸುವ ಹಂತಗಳನ್ನು ಬದಲಾಯಿಸುವುದು.

v) ಅನುಬಂಧ–IXರಲ್ಲಿ ಪಟ್ಟಿ ಮಾಡಲಾದ ಕಾಮಗಾರಿ ಕರಾರುಗಳ ಮೇಲೆ ಸದರಿ ಅನುಬಂಧಗಳಲ್ಲಿ ಸೂಚಿಸಲಾದ ದರಗಳಂತೆ ಮಾರಾಟ ತೆರಿಗೆ ವಿಧಿಸುವುದು.

vi) ಅನುಬಂಧ–X ರಲ್ಲಿ ಸೂಚಿಸಲಾದ ಸರಕುಗಳ ಮೇಲೆ ಅದರಲ್ಲಿ ತೋರಿಸಲಾದ ದರಗಳ ಪ್ರಕಾರ ಈಗಿರುವ ಮೊದಲ ಹಂತದ ತೆರಿಗೆಯ ಜೊತೆಗೆ ಕೊನೆಯ ಮಾರಾಟ ಹಂತದ ತೆರಿಗೆಯನ್ನು ವಿಧಿಸುವುದು.

vii) ಅನುಬಂಧ–XI ರಲ್ಲಿ ಸೂಚಿಸಲಾದಂತೆ ಮಾರಾಟ ತೆರಿಗೆ ದರಗಳನ್ನು ಹೆಚ್ಚಿಸುವುದು.

(೨) ಈಗ ಮಾರಾಟ ತೆರಿಗೆ ಅಧಿನಿಯಮದ ಮೇರೆಗೆ ಒಟ್ಟಾರೆ ಕ್ಷಿಪ್ರ ತೆರಿಗೆ ನಿರ್ಧಾರಣೆಯ ಸೌಲಭ್ಯ ೨.೫ ಲಕ್ಷಗಳವರೆಗೆ ವಾರ್ಷಿಕ ವಹಿವಾಟು ಹೊಂದಿರುವ ವ್ಯಾಪಾರಿಗಳಿಗೆ ಲಭ್ಯವಿದೆ. ಈ ಸೌಲಭ್ಯವನ್ನು ೫ ಲಕ್ಷ ರೂಪಾಯಿಗಳವರೆಗೆ ವಾರ್ಷಿಕ ವಹಿವಾಟು ಹೊಂದಿರುವ ವ್ಯಾಪಾರಿಗಳಿಗೂ ವಿಸ್ತರಿಸಲು ಪ್ರಸ್ತಾವಿಸಲಾಗಿದೆ. ಇದರಿಂದಾಗಿ ೨೬,೦೦೦ಕ್ಕೂ ಹೆಚ್ಚು ಸಣ್ಣ ವ್ಯಾಪಾರಿಗಳಿಗೆ ಪ್ರಯೋಜನವಾಗುತ್ತದೆ.

(೩) ಪ್ರಸ್ತುತ, ಸಿವಿಲ್ ಕಾಮಗಾರಿಗಳನ್ನು ನಿರ್ವಹಿಸುವ ಕರಾರುದಾರರು ಮಾತ್ರ ರಾಜಿ ದರದಲ್ಲಿ ಮಾರಾಟ ತೆರಿಗೆ ಸಂದಾಯ ಮಾಡಲು ಅರ್ಹರಾಗುತ್ತಾರೆ ; ಮಾರಾಟ ತೆರಿಗೆಗೆ ವಿಧಿಸಬಹುದಾದ ಕಾಮಗಾರಿ ಕರಾರುಗಳನ್ನು ನಿರ್ವಹಿಸುವ ಎಲ್ಲ ಇತರ ಕರಾರುದಾರರಿಗೂ ರಾಜಿ ಸೌಲಭ್ಯವನ್ನು ವಿಸ್ತರಿಸಲು ಪ್ರಸ್ತಾವಿಸಲಾಗಿದೆ. ರಾಜಿ ದರವನ್ನು ಶೇಕಡ ೪ರಂತೆ ವಿಧಿಸಲು ಪ್ರಸ್ತಾವಿಸಲಾಗಿದೆ. ಮಾರಾಟ ತೆರಿಗೆ ಅಧಿನಿಯಮದ ೧೯–ಎ ಪ್ರಕರಣದ ಮೇರೆಗೆ ಈ ಕಾಮಗಾರಿ ಕರಾರುದಾರರಿಂದ ಮೂಲದಲ್ಲೇ ತೆರಿಗೆ ವಸೂಲು ಮಾಡಿಕೊಳ್ಳುವಂತೆ ಮಾಡಲು ನಾನು ಪ್ರಸ್ತಾವಿಸಿದ್ದೇನೆ.

(೪) ವ್ಯಾಪಾರದ ವಿಧಾನವನ್ನು ಬದಲಾಯಿಸುವುದರ ಮೂಲಕ ವ್ಯಾಪಾರವನ್ನು ಮಾರ್ಗಾಂತರಗೊಳಿಸುವುದನ್ನು ಹಾಗೂ ರಾಜಸ್ವ ಸೋರಿ ಹೋಗುವುದನ್ನು ತಡೆಗಟ್ಟಲು ವರ್ಷಾವಧಿಯ ಒಳಗೆ ಮಾರಾಟ ತೆರಿಗೆಯ ಹಂತವನ್ನು ಆಗಾಗ್ಗೆ ಬದಲಾಯಿಸುವುದು ಅಗತ್ಯವಾಗಿದೆ. ಆದ್ದರಿಂದ ಅಧಿಸೂಚನೆಯನ್ನು ಹೊರಡಿಸುವ ಮೂಲಕ ತೆರಿಗೆ ವಿಧಿಸುವ ಹಂತಗಳಲ್ಲಿ ಬದಲಾವಣೆ ಮಾಡುವ ಅಧಿಕಾರವನ್ನು ಸರ್ಕಾರಕ್ಕೆ ನೀಡಲು ಪ್ರಸ್ತಾವಿಸಲಾಗಿದೆ.

(೫) ಮಾರಾಟ ತೆರಿಗೆ ಅಧಿನಿಯಮದ ಮೇರೆಗೆ ನೀಡುವ ವಾರ್ಷಿಕ ವರದಿಯ ಅನುಬಂಧಗಳು ಆ ವರದಿಯೊಂದಿಗೆ ಸವಿವರ ಮಾಹಿತಿಗಳನ್ನು ಒದಗಿಸುವಂತೆ ವ್ಯಾಪಾರಿಗಳನ್ನು ಅಗತ್ಯಪಡಿಸಿರುವುದರಿಂದ, ವಾರ್ಷಿಕ ವರದಿಯನ್ನು ಸಲ್ಲಿಸುವ ಅವಧಿಯನ್ನು ಈಗ ಇರುವ ೩೦ ದಿನಗಳಿಂದ ೬೦ ದಿನಗಳಿಗೆ ಹೆಚ್ಚಿಸುವುದು ಅಪೇಕ್ಷಣೀಯ ಎಂದು ಭಾವಿಸಲಾಗಿದೆ. ಆದರೂ ವ್ಯಾಪಾರಿಗಳು ಮಾಸಿಕ ಮುಂಗಡ ತೆರಿಗೆಯನ್ನು ವಾಡಿಕೆಯಂತೆ ಸಂದಾಯ ಮಾಡುವುದನ್ನು ಮುಂದುವರಿಸತಕ್ಕದ್ದು.

(೬) ಪ್ರಸ್ತುತ ಮಾರಾಟ ತೆರಿಗೆ ಚೆಕ್ ಪೋಸ್ಟ್‌ದಲ್ಲಿ ದಂಡನೆ ವಿಧಿಸುವುದರಿಂದ ಬಾಧಿತನಾದ ಯಾವನೇ ವ್ಯಕ್ತಿಯು ಅಂಥ ಚೆಕ್‌ಪೋಸ್ಟ್ ಯಾವ ಅಪೀಲು ವಿಚಾರಣಾ ಪ್ರಾಧಿಕಾರದ ಅಧಿಕಾರ ಕ್ಷೇತ್ರದೊಳಗೆ ಬರುವುದೋ ಅಂಥ ಅಪೀಲು ವಿಚಾರಣಾ ಪ್ರಾಧಿಕಾರಕ್ಕೆ ತನ್ನ ಅಪೀಲನ್ನು ಸಲ್ಲಿಸಬೇಕಾಗುವುದು. ವ್ಯಾಪಾರಿಗಳಿಗೆ ಉಂಟಾಗುವ ತೊಂದರೆಯನ್ನು ನಿವಾರಿಸುವುದಕ್ಕಾಗಿ ಅವರು ಯಾವ ಅಪೀಲು ಪ್ರಾಧಿಕಾರದ ಅಧಿಕಾರದ ಕ್ಷೇತ್ರದೊಳಗೆ ವ್ಯಾಪಾರ ನಡೆಸುತ್ತಿರುವರೋ ಅಂಥ ಅಪೀಲು ವಿಚಾರಣಾ ಪ್ರಾಧಿಕಾರಕ್ಕೆ ಅಪೀಲುಗಳನ್ನು ಸಲ್ಲಿಸಲು ಅವರಿಗೆ ಅನುಕೂಲ ಕಲ್ಪಿಸಲು ಪ್ರಸ್ತಾವಿಸಲಾಗಿದೆ.

